## ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗಳ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1986

### ಪ್ರಕರಣಗಳ ಕ್ರಮಪಟ್ಟಿ

ಪ್ರಕರಣಗಳು :


ಅಧ್ಯಾಯ- I

ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.
2. ಪರಿಭಾಷೆಗಳು.

ಅಧ್ಯಾಯ- II

ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗಳು ನಿಯಮಿತ, ಧಾರವಾಡ-ಇದರ ಆರ್ಜನೆ ಮತ್ತು ವರ್ಗಾವಣೆ

3. ಸಂವಿಧಾನದ 31ಸಿ ಅನುಚ್ಛೇದದ ಅಡಿಯಲ್ಲಿ ಮಾಡಲಾದ ಘೋಷಣೆ.
4. ಗಿರಣಿಗಳನ್ನು ಸರ್ಕಾರಕ್ಕೆ ವರ್ಗಾಯಿಸುವುದು ಮತ್ತು ಅದರಲ್ಲಿ ಅವುಗಳನ್ನು ನಿಹಿತಗೊಳಿಸುವುದು.
5. ನಿಹಿತಗೊಳಿಸುವಿಕೆಯ ಸಾಮಾನ್ಯ ಪರಿಣಾಮ.
6. ಗುತ್ತಿಗೆಗೆ ಕೊಡುವವನು ಅಥವಾ ಗುತ್ತಿಗೆದಾರನು ಕೆಲವು ಹಿಂದಿನ ಹೊಣೆಗಳಿಗೆ ಬದ್ಧರಾಗಿರುವುದು.
7. ಹಿಂದಿನ ಮಜೂರಿ ಮುಂತಾದವುಗಳನ್ನು ವಸೂಲು ಮಾಡಲು ಸರ್ಕಾರಕ್ಕಿರುವ ಹಕ್ಕು.
8. ಗಿರಣಿಗಳನ್ನು ಕಂಪನಿಯಲ್ಲಿ ನಿಹಿತಗೊಳಿಸುವಂತೆ ನಿರ್ದೇಶಿಸಲು ಸರ್ಕಾರಕ್ಕಿರುವ ಅಧಿಕಾರ.

ಅಧ್ಯಾಯ-III

ಮೊಬಲಗುಗಳ ಸಂದಾಯ

9. ಗುತ್ತಿಗೆಗೆ ಕೊಡುವವನು, ಗುತ್ತಿಗೆದಾರ ಮತ್ತು ಇತರ ಹಿತಾಸಕ್ತ ವ್ಯಕ್ತಿಗಳಿಗೆ ಕೊಡಬೇಕಾಗಿರುವ ಮೊಬಲಗು.
10. ಹೆಚ್ಚಿನ ಮೊಬಲಗುಗಳ ಸಂದಾಯ.

ಅಧ್ಯಾಯ-IV

ಗಿರಣಿಗಳ ವ್ಯವಸ್ಥಾಪನೆಗಳು

11. ಗಿರಣಿಗಳ ವ್ಯವಸ್ಥಾಪನೆ ಮುಂತಾದವುಗಳು.
12. ಗಿರಣಿಗಳ ವ್ಯವಸ್ಥಾಪನೆಯ ಪ್ರಭಾರದಲ್ಲಿರುವ ವ್ಯಕ್ತಿಗಳ ಕರ್ತವ್ಯಗಳು.
13. ತಮ್ಮ ಸ್ವಾಧೀನದಲ್ಲಿರುವ ಆಸ್ತಿ ಮುಂತಾದವುಗಳ ಲೆಕ್ಕ ನೀಡಲು ವ್ಯಕ್ತಿಗಳ ಕರ್ತವ್ಯಗಳು.
14. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.

## ಅಧ್ಯಾಯ-V

### ಸಂದಾಯಗಳ ಕಮೀಷನರು

15. ಸಂದಾಯಗಳ ಕಮೀಷನರ ನೇಮಕಾತಿ.

16. ಕಮೀಷನರಿಗೆ ಸರ್ಕಾರದಿಂದ ಸಂದಾಯ.

17. ಸರ್ಕಾರ ಮತ್ತು ಕಂಪನಿಯ ಕೆಲವೊಂದು ಅಧಿಕಾರಗಳು.

18. ಕಮೀಷನರಿಗೆ ಕ್ಲೇಮು ಮಾಡುವುದು.

19. ಕ್ಲೇಮುಗಳ ಆದ್ಯತೆ.

20. ಕ್ಲೇಮುಗಳ ಪರೀಕ್ಷೆ.

21. ಕ್ಲೇಮುಗಳ ಅಂಗೀಕಾರ ಅಥವಾ ತಿರಸ್ಕಾರ.

22. ಕಮೀಷನರು ಕ್ಲೇಮುದಾರರಿಗೆ ಮೊಬಲಗನ್ನು ಬಟವಾಡೆ ಮಾಡುವುದು.

22ಎ. ಗುತ್ತಿಗೆದಾರನ ಮೊಬಲಗಿನ ಹಂಚಿಕೆ ಇತ್ಯಾದಿ.

23. ಬಟವಾಡೆ ಮಾಡದ ಅಥವಾ ಕ್ಲೇಮುಮಾಡದ ಮೊಬಲಗನ್ನು ಸಾಮಾನ್ಯ ರಾಜಸ್ವ ಲೆಕ್ಕಕ್ಕೆ ಜಮೆ ಮಾಡುವುದು.

## ಅಧ್ಯಾಯ-VI

### ಗಿರಣಿಗಳ ನೌಕರರಿಗೆ ಸಂಬಂಧಿಸುವ ಉಪಬಂಧಗಳು

24. ಗಿರಣಿಗಳ ಅಧಿಕಾರಿಗಳ ಅಥವಾ ಇತರ ನೌಕರರ ಸೇವಾ ವರ್ಗಾವಣೆ.

25. ಭವಿಷ್ಯ ನಿಧಿ, ಕಲ್ಯಾಣ ನಿಧಿ ಮೊದಲಾದುವುಗಳ ವರ್ಗಾವಣೆ.

## ಅಧ್ಯಾಯ-VII

### ಸಂಕೀರ್ಣ

26. ಅಧಿನಿಯಮವು ಅಧ್ಯಾರೋಹಿ ಪ್ರಭಾವವನ್ನು ಹೊಂದಿರುವುದು.

27. ಕಂಪನಿಯಿಂದ ಅನುಸಮರ್ಥನೆಯಾದ ಹೊರತು ಕರಾರು ಪರಿಣಾಮಕಾರಿಯಾಗುವುದು ನಿಂತುಹೋಗತಕ್ಕದ್ದು.

28. ಸದ್ಭಾವನೆಯಿಂದ ಕೈಗೊಳ್ಳಲಾದ ಕ್ರಮದ ರಕ್ಷಣೆ.

29. ದಂಡಗಳು.

30. ಕಂಪನಿಗಳಿಂದ ಆದ ಅಪರಾಧಗಳು.

31. ನಿಯಮಗಳ ರಚನಾಧಿಕಾರ.

32. ತೊಂದರೆಗಳನ್ನು ನಿವಾರಿಸಲು ಅಧಿಕಾರ.

33. ನಿರಸನ ಮತ್ತು ಉಳಿಸುವಿಕೆಗಳು.

ಅನುಸೂಚಿ

ಅನುಬಂಧ

* * * *

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

**1986ರ ಅಧಿನಿಯಮ ಸಂಖ್ಯೆ 29.-** ಕರ್ನಾಟಕ ಸಹಕಾರಿಗಿರಣಿಗಳ (ಮಹಾದೇವ ಬಟ್ಟೆ ಗಿರಣಿಗಳು ಎಂದು ಕರೆಯಲಾಗುವ) ವ್ಯವಸ್ಥಾಪನೆಯನ್ನು ಕೈಗಾರಿಕೆಗಳ (ಅಭಿವೃದ್ಧಿ ಮತ್ತು ವಿನಿಯಮನ) ಅಧಿನಿಯಮ, 1951ರ 19 ಎಎ- ಪ್ರಕರಣದ ಅಡಿಯಲ್ಲಿ ಭಾರತ ಸರ್ಕಾರವು ವಹಿಸಿಕೊಂಡಿತು ಮತ್ತು ತೊಂದರೆಗೀಡಾಗಿದ್ದ ಈ ಗಿರಣಿಗಳ ವ್ಯವಸ್ಥಾಪನೆಯನ್ನು ರಾಜ್ಯ ಸರ್ಕಾರಕ್ಕೆ ವಹಿಸಿಕೊಟ್ಟಿತು ಮತ್ತು 04.04.1979ರಿಂದ ಗಿರಣಿಗಳ ವ್ಯವಹರಣೆಗಳನ್ನು ರಾಜ್ಯ ಸರ್ಕಾರವು ನಡೆಸುತ್ತಿದೆ.

ತೊಂದರೆಗೀಡಾದ ಈ ಗಿರಣಿಯ ಹೊಣೆಗಳು ಮುಂತಾದವುಗಳ ನಿಲಂಬನೆಯ ಅವಧಿಯನ್ನು ಭಾರತ ಸರ್ಕಾರವು ಆಗಿಂದಾಗ್ಗೆ ವಿಸ್ತರಿಸುತ್ತಿದ್ದು 29.06.1986ನ್ನು ಅಂತಿಮ ದಿನಾಂಕವೆಂದು ತಿಳಿಸಲಾಗಿತ್ತು ಮತ್ತು ಈ ಘಟಕವನ್ನು ರಾಷ್ಟ್ರೀಯ ಬಟ್ಟೆ ನಿಗಮಕ್ಕೆ ಒಪ್ಪಿಸಿಕೊಡುವ ಪ್ರಸ್ತಾಪವು ಭಾರತ ಸರ್ಕಾರಕ್ಕೆ ಸಮ್ಮತವಾಗದಿದ್ದುದರಿಂದ ಗಿರಣಿಯ ಭವಿಷ್ಯತ್ತಿನ ಬಗ್ಗೆ ಪರಿಶೀಲಿಸಲು ರಾಜ್ಯ ಸರ್ಕಾರವನ್ನು ಕೋರಿತು.

ಅಂತಿಮವಾಗಿ, ಕರ್ನಾಟಕ ರಾಜ್ಯ ಸರ್ಕಾರವು ಗಿರಣಿಯನ್ನು ಆರ್ಜಿಸಿಕೊಂಡು ವರ್ಗಾಯಿಸುವ ಮೂಲಕ ಅದರ ವ್ಯವಸ್ಥಾಪನೆಯನ್ನು ಹೊಸದಾಗಿ ರಚಿತವಾದ ಕಂಪನಿಯಾಗಿರುವ ಕರ್ನಾಟಕ ರಾಜ್ಯ ಬಟ್ಟೆ ಕೈಗಾರಿಕೆ, ಖಾಸಗಿ ನಿಯಮಿತ - ಇದಕ್ಕೆ ಒಪ್ಪಿಸಿ ಕೊಡಲು ನಿರ್ಧರಿಸಿತು.

ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗಳು, ಧಾರವಾಡ-ಇದರ ಆರ್ಜನೆ ಮತ್ತು ವರ್ಗಾವಣೆಯು ಸಾರ್ವಜನಿಕ ಹಿತಾಸಕ್ತಿಯನ್ನು ಮತ್ತು ದೇಶದ ಅರ್ಥ ವ್ಯವಸ್ಥೆಗೆ ಅಗತ್ಯವಾದ ಮತ್ತು ಗಿರಣಿಯಲ್ಲಿರುವ ಸುಮಾರು 1,000 ಮಂದಿ ಕೆಲಸಗಾರರ ಉದ್ಯೋಗ ಮುಂದುವರಿಕೆಗೆ ಅವಶ್ಯವಿರುವ ನೂಲೆಳೆ ಮತ್ತು ಬಟ್ಟೆಯ ನಿರಂತರ ತಯಾರಿಕೆ ಉತ್ಪಾದನೆ ಮತ್ತು ವಿತರಣೆಯನ್ನು ಖಚಿತಪಡಿಸಿಕೊಳ್ಳುವ ಮೂಲಕ ಹಿತಾಸಕ್ತಿಯು ಸಾಧಿತವಾಗುವ ಹಾಗೆ ಗಿರಣಿಗಳ ಸೂಕ್ತ ವ್ಯವಸ್ಥಾಪನೆಯನ್ನು ಸಾಧಿಸುವುದೂ ಆಗಿದೆ. ಸದರಿ ಗಿರಣಿಗಳ ಕಟ್ಟಡ, ಯಂತ್ರೋಪಕರಣಗಳು ತೀರ ಹಳೆಯವೂ ಮತ್ತು ಹಳೆಯ ಮಾದರಿಯವು ಆಗಿವೆ. ಆ ಕಾರಣದಿಂದಾಗಿಯೇ ಇದು ತೊಂದರೆಗೀಡಾಗಿದೆ ಮತ್ತು ಆರ್ಥಿಕವಾಗಿ ಸುಸ್ಥಿತಿಯಲ್ಲಿಲ್ಲ ಆದ್ದರಿಂದ ಜನಸಾಮಾನ್ಯರ ಹಿತಾಸಕ್ತಿ ಸಾಧಿತವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಮತ್ತು ನಿರುದ್ಯೋಗದ ವಿರುದ್ಧ ಪರಿಹಾರವನ್ನು ಒದಗಿಸುವುದಕ್ಕಾಗಿ ಸದರಿ ಗಿರಣಿಗಳನ್ನು ಆರ್ಜಿಸುವುದು ಅವಶ್ಯಕವಾಗಿದೆ.

ಕರ್ನಾಟಕ ವಿಧಾನಪರಿಷತ್ತು ಅಧಿವೇಶನದಲ್ಲಿಲ್ಲದಿದ್ದುದರಿಂದ, ವಿಷಯವು ತುರ್ತಿನದಾದುದರಿಂದ ಕರ್ನಾಟಕ ಸಹಕಾರಿ ಬಟ್ಟೆಗಿರಣಿಗಳು (ಆರ್ಜನೆ ಮತ್ತು ವರ್ಗಾವಣೆ) ಅಧ್ಯಾದೇಶ,1986 (1986ರ ಕರ್ನಾಟಕ ಅಧ್ಯಾದೇಶ)ನ್ನು ಪ್ರಖ್ಯಾಪಿಸಲಾಯಿತು.

ಈ ವಿಧೇಯಕವು ಸದರಿ ಅಧ್ಯಾದೇಶವನ್ನು ಬದಲಿಸುವುದಾಗಿದೆ.

ಆದ್ದರಿಂದ ಈ ವಿಧೇಯಕ.

(1986ರ ವಿಧಾನಸಭಾ ವಿಧೇಯಕ ಸಂಖ್ಯೆ 41ರಲ್ಲಿದ್ದಂತೆ.) (ಎಲ್ಎಡಬ್ಲ್ಯೂ 52 ಎಲ್ಜಿಎನ್ 86)

**II**

**2005ರ ತಿದ್ದುಪಡಿ ಅಧಿನಿಯಮ ಸಂಖ್ಯೆ 20:** ಕರ್ನಾಟಕ ರಾಜ್ಯ ಬಟ್ಟೆಗಿರಣಿ ನಿಯಮಿತ / ಮಹದೇವ ಬಟ್ಟೆಗಿರಣಿಗೆ ಗುತ್ತಿಗೆ ನೀಡಿದ ಭೂಮಿಯ ಒಡೆಯರು ತಾವು ಎಂಬುದಾಗಿ ಕ್ಲೇಮುಮಾಡಿ ಆ ಗಿರಣಿಗೆ ಸೇರಿದ ಸ್ವತ್ತುಗಳ ಮಾರಾಟಕ್ಕಾಗಿ ಕರ್ನಾಟಕ ರಾಜ್ಯ ಕೈಗಾರಿಕೆ ಬಂಡವಾಳ ಹೂಡಿಕೆ ಅಭಿವೃದ್ಧಿ

ನಿಗಮದ ಜಾಹಿರಾತಿನ ಪ್ರಕಟಣೆಯನ್ನು ಪ್ರಶ್ನಿಸಿ ಶ್ರೀಮತಿ ಸುಶೀಲ ಮತ್ತು ಇತರರು ರಿಟ್ ಅರ್ಜಿ ಸಂಖ್ಯೆ: 4227/99, 4590/99 ಮತ್ತು 4591/99 ಗಳನ್ನು ದಾಖಲಾಮ್ಮಿದ್ದರು.

ಕರ್ನಾಟಕದ ಮಾನ್ಯ ಉಚ್ಚನ್ಯಾಯಾಲಯವು, ಗುತ್ತಿಗೆ ನೀಡಿರುವವರು ಸದರಿ ಭೂಮಿಯ ಒಡೆಯರಲ್ಲವೆಂದು ತಿಳಿಸುತ್ತಾ ಪರಮಾದೇಶದ ರಿಟ್ ಒಂದನ್ನು ಹೊರಡಿಸುವ ಮೂಲಕ ರಾಜ್ಯ ಸರ್ಕಾರವು ಭೂಮಿಯ ಒಡೆತನದ ಹಕ್ಕು ಸ್ವಾಮ್ಯವನ್ನು ಅರ್ಜಿಸಿದೆ ಎಂದು ಕಾನೂನು ರೀತ್ಯ ಸ್ಥಾಪಿತವಾದ ಹೊರತು ಮತ್ತು ಸ್ಥಾಪಿತವಾಗುವವರೆಗೂ ಜಮೀನು ಸ್ವತ್ತನ್ನು ಅಥವಾ ಗಿರಣಿ ಇರುವ ಅಥವಾ ಅನ್ಯಥಾ ಭೂಮಿಯನ್ನು ಸಹ ಹರಾಜು ಮಾಡಕೂಡದೆಂದು ಅಥವಾ ಮಾರಾಟಮಾಡಕೂಡದೆಂದು ರಾಜ್ಯ ಸರ್ಕಾರಕ್ಕೆ ಮತ್ತು ಪ್ರತ್ಯರ್ಜಿದಾರರಿಗೆ ನಿರ್ದೇಶಿಸಿತು.

ಆದ್ದರಿಂದ, ಮೇಲೆ ಉಲ್ಲೇಖಿಸಿದ ರಿಟ್ ಅರ್ಜಿಗಳಲ್ಲಿ ಕರ್ನಾಟಕದ ಮಾನ್ಯ ಉಚ್ಚನ್ಯಾಯಾಲಯವು ಜಾರಿಗೊಳಿಸಿದ ಆದೇಶವನ್ನು ಗಮನದಲ್ಲಿಟ್ಟುಕೊಂಡು, ಸರ್ಕಾರದ ಭೂಮಿಯು ಕೈ ತಪ್ಪಿಹೋಗುವುದನ್ನು ತಡೆಯಲು 30.6.86 ರಿಂದ ಪರಿಣಾಮಕಾರಿಯಾಗುವಂತೆ ಕರ್ನಾಟಕ ಸಹಕಾರಿ ಬಟ್ಟೆಗಿರಣಿಗಳ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1986ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಯಿತು.

ಆದ್ದರಿಂದ ಈ ವಿಧೇಯಕ.

(2004ರ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ 05 ರಲ್ಲಿದ್ದಂತೆ.) (ಸಂವ್ಯಶಾಹಿ 41 ಶಾಸನ 2003)

* * * *

1986ರ ಕರ್ನಾಟಕ ಅಧಿನಿಯಮ ಸಂಖ್ಯೆ 29

*(1986ರ ಅಕ್ಟೋಬರ್ 1ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

**ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗಳ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1986**

*(1986ರ ಸೆಪ್ಟೆಂಬರ್ 29ನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರ ಅನುಮತಿ ಪಡೆಯಲಾಗಿದೆ)*

*(2005ರ 20ನೇ ಅಧಿನಿಯಮದಲ್ಲಿ ತಿದ್ದುಪಡಿಯಾದಂತೆ)*

**ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗಳು, ಧಾರವಾಡ - ಇದರ ಆರ್ಜನೆ ಮತ್ತು ವರ್ಗಾವಣೆಗಾಗಿ ಮತ್ತು ದೇಶದ ಅರ್ಥ ವ್ಯವಸ್ಥೆಗೆ ಅಗತ್ಯವಾದ ಅವಶ್ಯಕ ನೂಲೆಳೆ ಮತ್ತು ಬಟ್ಟೆಯ ನಿರಂತರ ತಯಾರಿಕೆ, ಉತ್ಪಾದನೆ ಹಾಗೂ ವಿತರಣೆಯನ್ನು ಖಚಿತಪಡಿಸಿಕೊಳ್ಳುವ ಮೂಲಕ ಜನಸಾಮಾನ್ಯರ ಹಿತಾಸಕ್ತಿಯು ಸಾಧಕವಾಗುವ ಹಾಗೆ ಸದರಿ ಗಿರಣಿಗಳ ಸೂಕ್ತ ವ್ಯವಸ್ಥಾಪನೆಯನ್ನು ಸುನಿಶ್ಚಿತಗೊಳಿಸಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಆನುಷಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.**

ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗಳು - ಇದರ ಮಾಲೀಕರಾದ ಮೆಸರ್ಸ್ ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗಳು ನಿಯಮಿತ, ಧಾರವಾಡ - ಇವರು 1969ನೇ ವರ್ಷದಲ್ಲಿ ಸದರಿ ಗಿರಣಿಗಳನ್ನು ಮುಚ್ಚಿದ್ದು, ತದನಂತರ 1970ರಲ್ಲಿ ರಾಜ್ಯಸರ್ಕಾರದ ಅನುಮತಿಯಿಂದ ಸದರಿ ಗಿರಣಿಗಳನ್ನು ಒಂದು ಪಾಲುಗಾರಿಕೆ ಫರ್ಮ್ ಆದ ಮೆಸರ್ಸ್ ಜಿ. ಮಹದೇವಪ್ಪ ಆ್ಯಂಡ್ ಸನ್ಸ್ - ಹುಬ್ಬಳ್ಳಿ ಇದಕ್ಕೆ ಗುತ್ತಿಗೆಗೆ ನೀಡಿದ್ದು ಸದರಿ ಗಿರಣಿಗಳ ವ್ಯವಹಾರವನ್ನು ಸೂಕ್ತವಾಗಿ ನಿರ್ವಹಿಸಲು ಶಕ್ತವಾಗದಿರುವುದರಿಂದ ಗುತ್ತಿಗೆದಾರರೂ ಸಹ 1979ರಲ್ಲಿ ಗಿರಣಿಗಳನ್ನು ಮುಚ್ಚಿದುದರಿಂದ;

ಸದರಿ ಗಿರಣಿಗಳ ಮುಚ್ಚುವಿಕೆಯು ಹತ್ತಿ ಬಟ್ಟೆ ಕೈಗಾರಿಕೆಯಂಥ ಅನುಸೂಚಿತ ಕೈಗಾರಿಕೆಗೆ ಪ್ರತಿಕೂಲವಾದ್ದರಿಂದ, ಭಾರತ ಸರ್ಕಾರವು, ಕೈಗಾರಿಕೆ (ಅಭಿವೃದ್ಧಿ ಮತ್ತು ವಿನಿಯಮನ)ಗಳ ಅಧಿನಿಯಮ, 1951ರ 18ಎಎ ಪ್ರಕರಣದ ಅಡಿಯಲ್ಲಿ ಸಂಖ್ಯೆ ಎಸ್. ಒ 170 (ಇ) 18 ಎಎ/ ಐಡಿಆರ್ಎ/ 79 ದಿನಾಂಕ 30-3-1979ರಂದು ಒಂದು ಅಧಿಸೂಚನೆಯನ್ನು ಹೊರಡಿಸಿ ಸದರಿ ಗಿರಣಿಗಳ ವ್ಯವಸ್ಥಾಪನೆಯನ್ನು ವಹಿಸಿಕೊಳ್ಳಲು ಪ್ರಾರಂಭದಲ್ಲಿ ಐದು ವರ್ಷಗಳಿಗೆ ಮೀರದ ಅವಧಿಗೆ ಮತ್ತು ಮುಂದೆ ಆಗಿಂದಾಗ್ಗೆ ಹೆಚ್ಚಿನ ಅವಧಿಗಳಿಗಾಗಿ ರಾಜ್ಯ ಸರ್ಕಾರವನ್ನು ಪ್ರಾಧಿಕೃತಗೊಳಿಸಿದುದರಿಂದ;

ರಾಜ್ಯಸರ್ಕಾರದಿಂದ ನೇಮಕಗೊಂಡ ಅಧಿಕಾರಿಯು 1979ರ ಏಪ್ರಿಲ್ 4ನೇ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ, ಗುತ್ತಿಗೆದಾರನ ಸ್ವಾಧೀನದಲ್ಲಿದ್ದ, ಸದರಿ ಗಿರಣಿಗಳ ಚರ ಮತ್ತು ಸ್ಥಿರ ಸ್ವತ್ತುಗಳ ಪ್ರಭಾರವನ್ನು ವಹಿಸಿಕೊಂಡಿರುವುದರಿಂದ;

ಸದರಿ ಗಿರಣಿಗಳ ಕಟ್ಟಡಗಳು, ಯಂತ್ರೋಪಕರಣಗಳು ಮತ್ತು ಇತರ ಉತ್ಪಾದನಾ ಉಪಕರಣಗಳು ಬಹಳ ಹಳೆಯವೂ, ಹಳೆಯ ಕಾಲದವೂ, ಹಳೆಯ ಮಾದರಿಯವೂ ಆಗಿರುವುದರ ಕಾರಣದಿಂದಾಗಿ ಕೆಲಸ ನಿರ್ವಹಿಸಲು ಅಸಮರ್ಥವಾಗಿದ್ದು ಆರ್ಥಿಕವಾಗಿ ಅಡ್ಡಿಯಾಗಿರುವುದರಿಂದ ಮತ್ತು ಅಲ್ಲಿ ಸುಧಾರಣೆಗಳನ್ನು ಮಾಡಿ ಸದರಿ ಗಿರಣಿಗಳ ಸೂಕ್ತ ವ್ಯವಸ್ಥಾಪನೆ ಮತ್ತು ಅಭಿವೃದ್ಧಿಗಾಗಿ ಮತ್ತು ಅರ್ಥವ್ಯವಸ್ಥೆಯ ಅಗತ್ಯಗಳಿಗೆ ಅವಶ್ಯಕವಾಗಿರುವ ಬಟ್ಟೆ ಮತ್ತು ನೂಲೆಳೆಯ ನಿರಂತರ ಉತ್ಪಾದನೆ ಮತ್ತು ವಿತರಣೆಯ ಮೂಲಕ ಜನಸಾಮಾನ್ಯರ ಹಿತಾಸಕ್ತಿ ಸಾಧಿತವಾಗಿದೆಯೆಂಬುದನ್ನು ಖಚಿತಪಡಿಸುವುದಕ್ಕಾಗಿ ಸದರಿ ಗಿರಣಿಗಳನ್ನು

ಆರ್ಜಿಸುವುದು ಅವಶ್ಯಕವಾಗಿರುವುದರಿಂದ ಮತ್ತು ನಿರುದ್ಯೋಗದ ವಿರುದ್ಧ ಪರಿಹಾರ ಒದಗಿಸಬೇಕಾಗಿರುವುದರಿಂದ ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಆನುಷಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸಬೇಕಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಮೂವತ್ತೇಳನೇ ವರ್ಷದಲ್ಲಿ, ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

## ಅಧ್ಯಾಯ I

## ಪ್ರಾರಂಭಿಕ

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗಳ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1986 ಎಂದು ಕರೆಯತಕ್ಕದ್ದು.

(2) ಇದು, ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ [1][ದಿನಾಂಕದಂದು][1] ಜಾರಿಯಲ್ಲಿ ಬರತಕ್ಕದ್ದು ಮತ್ತು ಈ ಅಧಿನಿಯಮ ವಿವಿಧ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

1. ಈ ಅಧಿನಿಯಮವನ್ನು ಜಾರಿಗೊಳಿಸುವ ಅಧಿಸೂಚನೆಯು ಲಭ್ಯವಿಲ್ಲ.

2. **ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಗೊತ್ತುಪಡಿಸಲಾದ ದಿನಾಂಕ" ಎಂದರೆ ಈ ಅಧಿನಿಯಮ ಅಥವಾ ಅದರ ಯಾವುದೇ ಉಪಬಂಧವು ಜಾರಿಯಲ್ಲಿ ಬರುವ ದಿನಾಂಕ;

(ಬಿ) "ಕಮೀಷನರು" ಎಂದರೆ ಈ ಅಧಿನಿಯಮದ 15ನೇ ಪ್ರಕರಣದ ಅಡಿಯಲ್ಲಿ ನೇಮಕಗೊಂಡ, ಸಂದಾಯಗಳ ಕಮೀಷನರು;

(ಸಿ) "ಕಂಪನಿ" ಎಂದರೆ ಕಂಪನಿಗಳ ಅಧಿನಿಯಮ, 1956ರ ಉಪಬಂಧಗಳ ಅಡಿಯಲ್ಲಿ ನೋಂದಾಯಿತವಾದ ಒಂದು ಕಂಪನಿಯಾದ ಕರ್ನಾಟಕ ರಾಜ್ಯ ಬಟ್ಟೆ ಕೈಗಾರಿಕೆ, ಖಾಸಗಿ, ನಿಯಮಿತ;

(ಡಿ) "ಸರ್ಕಾರ" ಎಂದರೆ ರಾಜ್ಯ ಸರ್ಕಾರ;

(ಇ) "ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗಳು" ಎಂದರೆ ನ್ಯೂ ಕರ್ನಾಟಕ ಕಾಟನ್ ಮಿಲ್ಸ್ ಹುಬ್ಬಳ್ಳಿ ಎಂಬ ಅಂಕಿತನಾಮದೊಂದಿಗೆ ಮೊದಲು ನಡೆಯುತ್ತಿದ್ದ ಮತ್ತು 1959ರ ಅಕ್ಟೋಬರ್ 8ನೇ ದಿನಾಂಕದಂದು ಮಾಡಿಕೊಂಡ ಒಡಂಬಡಿಕೆಯ ಮೇಲೆ ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗಳು ನಿಯಮಿತ, ಧಾರವಾಡ-ಇವರಿಂದ ಖರೀದಿಗೊಂಡು 1970ರ ಆಗಸ್ಟ್ 29ನೇ ದಿನಾಂಕದ ಒಂದು ನೋಂದಾಯಿತ ಗುತ್ತಿಗೆ ಪತ್ರದ ಮೂಲಕ "ಮಹದೇವ್ ಟೆಕ್ಸ್‌ಟೈಲ್ ಮಿಲ್ಸ್, ಹುಬ್ಬಳ್ಳಿ" ಎಂಬ ಅಂಕಿತನಾಮದೊಂದಿಗೆ ಗಿರಣಿಗಳನ್ನು ನಡೆಸುತ್ತಿದ್ದ ಒಂದು ಪಾಲುದಾರಿಕೆ ಫರ್ಮ್ ಆದ ಮೆಸರ್ಸ್ ಜಿ. ಮಹದೇವಪ್ಪ ಅಂಡ್ ಸನ್ಸ್, ಜಯಚಾಮರಾಜನಗರ, ಹುಬ್ಬಳ್ಳಿ - 20 ಇವರಿಗೆ ಗುತ್ತಿಗೆಗೆ ಕೊಟ್ಟ ಸಂಯುಕ್ತ ಬಟ್ಟೆ ಗಿರಣಿಗಳನ್ನು ಮತ್ತು ಇದು ಗುತ್ತಿಗೆಗೆ ಕೊಡುವವನ ಅಥವಾ ಗುತ್ತಿಗೆದಾರನ ಒಡೆತನದಲ್ಲಿರುವ ಸದರಿ ಸಂಯುಕ್ತ ಬಟ್ಟೆ ಗಿರಣಿಗಳ ಎಲ್ಲ ಚರ ಮತ್ತು ಸ್ಥಿರ ಸ್ವತ್ತುಗಳನ್ನು ಮತ್ತು ಗುತ್ತಿಗೆಗೆ ಕೊಡುವವನ ಅಥವಾ ಗುತ್ತಿಗೆದಾರನ ಒಡೆತನದಲ್ಲಿರುವ ಎಲ್ಲ ಇತರ ಚರ ಮತ್ತು ಸ್ಥಿರ ಸ್ವತ್ತುಗಳನ್ನು [1][ಮತ್ತು ಈ ಅಧಿನಿಯಮಕ್ಕೆ ಲಗತ್ತಾದ ಅನುಬಂಧದಲ್ಲಿ ನಿರ್ದಿಷ್ಟಪಡಿಸಿದ

ಭೂಮಿಯ ಒಡೆಯನಿಗೆ ಸಂಬಂಧಪಟ್ಟ ಭೂಮಿಯಾಗಿದ್ದು, ಗಿರಣಿಯ ಉದ್ದೇಶಕ್ಕಾಗಿ ಗುತ್ತಿಗೆ ಮೇಲೆ ಹೊಂದಿರುವ ಭೂಮಿಯನ್ನು][1] ಒಳಗೊಳ್ಳುತ್ತದೆ;

1. 2005ರ ಅಧಿನಿಯಮ ಸಂಖ್ಯೆ 20ರ ಮೂಲಕ ದಿನಾಂಕ: 30.06.1986 ರಿಂದ ಸೇರಿಸಲಾಗಿದೆ.

(ಎಫ್) "ಗುತ್ತಿಗೆದಾರ" ಎಂದರೆ ಮೆಸರ್ಸ್ ಜಿ. ಮಹದೇವಪ್ಪ ಅಂಡ್ ಸನ್ಸ್, ಜಯಚಾಮರಾಜನಗರ, ಹುಬ್ಬಳ್ಳಿ - 20 ಎಂಬ ಹೆಸರಿನ ಪಾಲುದಾರಿಕೆ ಫರ್ಮು;

(ಜಿ) "ಗುತ್ತಿಗೆಗೆ ಕೊಡುವವನು" ಎಂದರೆ ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959ರ ಅಡಿಯಲ್ಲಿ ನೋಂದಾಯಿತವಾಗಿದೆಯೆಂದು ಭಾವಿಸಲಾದ ಒಂದು ಸಹಕಾರಿ ಸಂಘವಾಗಿರುವ ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗಳು, ನಿಯಮಿತ, ಧಾರವಾಡ;

[1][(ಜಿಜಿ) "ಭೂಮಿಯ ಒಡೆಯ" ಎಂದರೆ, ಈ ಅಧಿನಿಯಮಕ್ಕೆ ಲಗತ್ತಾದ ಅನುಬಂಧದಲ್ಲಿ ನಿರ್ದಿಷ್ಟಪಡಿಸಲಾದ ಮತ್ತು ಕರ್ನಾಟಕ ಸಹಕಾರಿ ಬಟ್ಟೆಗಿರಣಿಗಳ ಉದ್ದೇಶಕ್ಕಾಗಿ ಗುತ್ತಿಗೆ ಪಡೆದ ಭೂಮಿಯು ಯಾವ ವ್ಯಕ್ತಿಗೆ ಸೇರಿದೆಯೋ ಆ ವ್ಯಕ್ತಿ ಮತ್ತು ಅವನ ವಾರಸುದಾರ ಅಥವಾ ಕಾನೂನು ಸಮ್ಮತ ಪ್ರತಿನಿಧಿ ಎಂಬುದಾಗಿ ಅಂಥ ಭೂಮಿಯ ಸ್ವಾಮ್ಯ ಹಕ್ಕು ಕ್ಲೇಮು ಮಾಡುವ ಯಾರೇ ವ್ಯಕ್ತಿಯನ್ನು ಒಳಗೊಳ್ಳುತ್ತದೆ.][1]

1. 2005ರ ಅಧಿನಿಯಮ ಸಂಖ್ಯೆ 20ರ ಮೂಲಕ ದಿನಾಂಕ: 30.06.1986 ರಿಂದ ಸೇರಿಸಲಾಗಿದೆ.

(ಎಚ್) "ಪ್ರಸ್ತುತ ವ್ಯವಸ್ಥಾಪನೆ" ಎಂದರೆ ಅಧಿಸೂಚನೆ ಸಂಖ್ಯೆ ಎಸ್. ಓ 170 (ಇ) /18 ಎಎ-ಐಡಿಆರ್ಎ/ 79 ದಿನಾಂಕ 30-3-1979ರ ಮೇರೆಗೆ ಕೈಗಾರಿಕಾ (ಅಭಿವೃದ್ಧಿ ಮತ್ತು ವಿನಿಯಮನ) ಅಧಿನಿಯಮ, 1951 (1951ರ ಕೇಂದ್ರಾಧಿನಿಯಮ ಸಂಖ್ಯೆ 65)ರ 18ಎಎ-ಪ್ರಕರಣದ 1ನೇ ಉಪ-ಪ್ರಕರಣದ (ಬಿ) ಖಂಡದ ಅಡಿಯಲ್ಲಿ ಕೇಂದ್ರ ಸರ್ಕಾರದಿಂದ ಪ್ರಾಧಿಕೃತವಾದ ರಾಜ್ಯ ಸರ್ಕಾರ;

(ಐ) "ಅನುಸೂಚಿ" ಎಂದರೆ ಈ ಅಧಿನಿಯಮಕ್ಕೆ ಅನುಬಂಧಿಸಲಾದ ಅನುಸೂಚಿ;

(ಜೆ) "ನಿರ್ದಿಷ್ಟಪಡಿಸಲಾದ ದಿನಾಂಕ" ಎಂದರೆ ಸರ್ಕಾರವು ಈ ಅಧಿನಿಯಮದ ಯಾವುವೇ ಉಪಬಂಧಗಳ ಉದ್ದೇಶಗಳಿಗಾಗಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕ.

## ಅಧ್ಯಾಯ II

### ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗಳು ನಿಯಮಿತ, ಧಾರವಾಡ-ಇದರ ಆರ್ಜನೆ ಮತ್ತು ವರ್ಗಾವಣೆ

**3. ಸಂವಿಧಾನದ 31ಸಿ ಅನುಚ್ಛೇದದ ಅಡಿಯಲ್ಲಿ ಮಾಡಲಾದ ಘೋಷಣೆ.-** ಈ ಅಧಿನಿಯಮದ ಉಪಬಂಧಗಳು ಸಂವಿಧಾನದ 39ನೆಯ ಅನುಚ್ಛೇದದ (ಎ) ಮತ್ತು (ಬಿ) ಖಂಡಗಳಲ್ಲಿ ವಿಧಿಸಿದ ತತ್ವಗಳನ್ನು ಸಾಧಿಸಲು ಸರ್ಕಾರದ ನೀತಿಯನ್ನು ಪರಿಣಾಮಕಾರಿಗೊಳಿಸುವಂಥವು ಎಂದು ಈ ಮೂಲಕ ಘೋಷಿಸಲಾಗಿದೆ.

**4. ಗಿರಣಿಗಳನ್ನು ಸರ್ಕಾರಕ್ಕೆ ವರ್ಗಾಯಿಸುವುದು ಮತ್ತು ಅದರಲ್ಲಿ ಅವುಗಳನ್ನು ನಿಹಿತಗೊಳಿಸುವುದು.-** ಗೊತ್ತುಪಡಿಸಲಾದ ದಿನಾಂಕದಂದು, ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗಳು (ಇಲ್ಲಿ, ಇನ್ನು ಮುಂದೆ ಗಿರಣಿಗಳು ಎಂದು ಉಲ್ಲಿಖಿತವಾದ) ಮತ್ತು ಗಿರಣಿಗಳಿಗೆ ಸಂಬಂಧಪಟ್ಟಂತೆ ಗುತ್ತಿಗೆಗೆ ಕೊಡುವವನ ಮತ್ತು ಗುತ್ತಿಗೆದಾರನ [1][ಮತ್ತು ಭೂಮಿಯ ಒಡೆಯನ][1] ಹಕ್ಕುಗಳು, ಸ್ವಾಮ್ಯ ಮತ್ತು ಹಿತಾಸಕ್ತಿಗಳು ಈ ಅಧಿನಿಯಮದ ಕಾರಣದಿಂದಾಗಿ ಸರ್ಕಾರಕ್ಕೆ ವರ್ಗಾವಣೆಯಾಗತಕ್ಕದ್ದು ಮತ್ತು ಸಂಪೂರ್ಣವಾಗಿ ಅದರಲ್ಲಿಯೇ ನಿಹಿತವಾಗತಕ್ಕದ್ದು.

1. 2005ರ ಅಧಿನಿಯಮ ಸಂಖ್ಯೆ 20ರ ಮೂಲಕ ದಿನಾಂಕ: 30.06.1986 ರಿಂದ ಸೇರಿಸಲಾಗಿದೆ.

**5. ನಿಹಿತಗೊಳಿಸುವಿಕೆಯ ಸಾಮಾನ್ಯ ಪರಿಣಾಮ.-** (1) ಗಿರಣಿಗಳು, ಎಲ್ಲ ಆಸ್ತಿಗಳು, ಹಕ್ಕುಗಳು, ಗುತ್ತಿಗೆಗೆ ಹಿಡಿಯಲಾದವುಗಳು, ಅಧಿಕಾರಗಳು, ಪ್ರಾಧಿಕಾರಗಳು ಮತ್ತು ವಿಶೇಷಾಧಿಕಾರಗಳು ಮತ್ತು ಜಮೀನುಗಳು, ಕಟ್ಟಡಗಳು, ಕಾರ್ಯಾಗಾರಗಳು, ದಾಸ್ತಾನು, ಸಲಕರಣೆಗಳು, ಯಂತ್ರೋಪಕರಣಗಳು ಮತ್ತು ಉಪಕರಣಗಳು, ನಗದು ಶಿಲ್ಕು, ಕೈಯಲ್ಲಿರುವ ನಗದು, ಮೀಸಲು ನಿಧಿ, ಬಂಡವಾಳಗಳು ಮತ್ತು ಪುಸ್ತಕದಲ್ಲಿ ಕಾಣಿಸಿದ ಋಣಗಳೂ ಸೇರಿದಂತೆ ಎಲ್ಲ ಚರ ಮತ್ತು ಸ್ಥಿರ ಸ್ವತ್ತು ಹಾಗೂ ಗೊತ್ತುಪಡಿಸಲಾದ ದಿನಾಂಕದ ನಿಕಟ ಪೂರ್ವದಂದು, ಭಾರತದಲ್ಲಿರುವ ಅಥವಾ ಭಾರತದ ಹೊರಗಡೆಯಿರುವ ಗುತ್ತಿಗೆಗೆ ಕೊಡುವವನ ಅಥವಾ ಗುತ್ತಿಗೆದಾರನ [1][ಮತ್ತು ಭೂಮಿಯ ಒಡೆಯನ][1] ಒಡೆತನ, ಸ್ವಾಧೀನತೆ, ಅಧಿಕಾರ ಅಥವಾ ನಿಯಂತ್ರಣದಲ್ಲಿದ್ದ ಅಂಥ ಸ್ವತ್ತಿನಲ್ಲಿರುವ ಅಥವಾ ಅದರಿಂದ ಉದ್ಭವಿಸುವ ಎಲ್ಲ ಇತರ ಹಕ್ಕುಗಳು ಮತ್ತು ಹಿತಾಸಕ್ತಿಗಳು ಮತ್ತು ಅದಕ್ಕೆ ಸಂಬಂಧಪಟ್ಟ ಯಾವುದೇ ಸ್ವರೂಪದ ಎಲ್ಲ ಲೆಕ್ಕಪತ್ರ, ಪುಸ್ತಕಗಳು, ರಿಜಿಸ್ಟರುಗಳು ಮತ್ತು ದಸ್ತಾವೇಜುಗಳನ್ನು ಒಳಗೊಳ್ಳುವುದಾಗಿ ಭಾವಿಸತಕ್ಕದ್ದು.

1. 2005ರ ಅಧಿನಿಯಮ ಸಂಖ್ಯೆ 20ರ ಮೂಲಕ ದಿನಾಂಕ: 30.06.1986 ರಿಂದ ಸೇರಿಸಲಾಗಿದೆ.

(2) 4ನೇ ಪ್ರಕರಣದ ಅಡಿಯಲ್ಲಿ ಸರ್ಕಾರದಲ್ಲಿ ನಿಹಿತವಾಗಿರುವ ಪೂರ್ವೋಕ್ತ ಎಲ್ಲ ಸ್ವತ್ತುಗಳನ್ನು ಅಂಥ ನಿಹಿತಗೊಳಿಸುವಿಕೆಯ ಕಾರಣದಿಂದಾಗಿ ಅವುಗಳಿಗೆ ಬಾಧಕವಾಗಿರುವ ಯಾವುದೇ ನ್ಯಾಸ, ಹೊಣೆ, ಅಡಮಾನ, ಗುತ್ತಿಗೆ, ಚಾರ್ಜು, ಧಾರಣಾಧಿಕಾರ ಮತ್ತು ಎಲ್ಲ ಇತರ ಋಣಭಾರಗಳಿಂದಲೂ ಮುಕ್ತಗೊಳಿಸಿ ಬಿಡುಗಡೆ ಮಾಡತಕ್ಕದ್ದು ಮತ್ತು ಅಂಥ ಸ್ವತ್ತಿನ ಉಪಯೋಗವನ್ನು ಯಾವುದೇ ರೀತಿಯಲ್ಲಿ ನಿರ್ಬಂಧಿಸುವ ಯಾವುದೇ ನ್ಯಾಯಾಲಯದ ಯಾವುದೇ ಜಪ್ತಿ, ನಿರ್ಬಂಧಕಾಜ್ಞೆ ಅಥವಾ ಡಿಕ್ರಿ ಅಥವಾ ಆದೇಶವನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

(3) ಈ ಅಧಿನಿಯಮದ ಅಡಿಯಲ್ಲಿ ಸರ್ಕಾರದಲ್ಲಿ ನಿಹಿತವಾಗಿರುವ ಯಾವುದೇ ಸ್ವತ್ತಿನ ಪ್ರತಿಯೊಬ್ಬ ಅಡಮಾನದಾರನು [1][ಮತ್ತು ಅಂಥ ಸ್ವತ್ತಿನಲ್ಲಿ ಅಥವಾ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಹಿತಾಸಕ್ತಿ ಹೊಂದಿದ ಪ್ರತಿಯೊಬ್ಬ ಭೂಮಿಯ ಒಡೆಯನು][1] ಮತ್ತು ಯಾವುದೇ ಅಂಥ ಸ್ವತ್ತಿನಲ್ಲಿ ಅಥವಾ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಚಾರ್ಜು, ಗುತ್ತಿಗೆ, ಧಾರಣಾಧಿಕಾರ ಅಥವಾ ಇತರ ಹಿತಾಸಕ್ತಿಯನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು, ನಿಯಮಿಸಬಹುದಾದ ಅಂಥ ಕಾಲ ಮತ್ತು ಅಂಥ ರೀತಿಯಲ್ಲಿ ಕಮೀಷನರಿಗೆ ಅಂಥ ಅಡಮಾನ, ಗುತ್ತಿಗೆ, ಚಾರ್ಜು, ಧಾರಣಾಧಿಕಾರ ಅಥವಾ ಇತರ ಹಿತಾಸಕ್ತಿಯ ಬಗ್ಗೆ ತಿಳಿಸತಕ್ಕದ್ದು.

1. 2005ರ ಅಧಿನಿಯಮ ಸಂಖ್ಯೆ 20ರ ಮೂಲಕ ದಿನಾಂಕ: 30.06.1986 ರಿಂದ ಸೇರಿಸಲಾಗಿದೆ.

(4) ಸಂದೇಹಗಳ ನಿವಾರಣೆಗಾಗಿ, (3) ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಸ್ವತ್ತಿನ ಅಡಮಾನದಾರ [1][ಮತ್ತು ಅಂಥ ಸ್ವತ್ತಿನಲ್ಲಿ ಅಥವಾ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಹಿತಾಸಕ್ತಿ ಹೊಂದಿದ ಪ್ರತಿಯೊಬ್ಬ ಭೂಮಿಯ ಒಡೆಯ][1] ಅಥವಾ ಅಂಥ ಸ್ವತ್ತಿನಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಯಾವುದೇ ಚಾರ್ಜು, ಗುತ್ತಿಗೆ, ಧಾರಣಾಧಿಕಾರ ಅಥವಾ ಇತರ ಹಿತಾಸಕ್ತಿಯನ್ನು ಹೊಂದಿರುವ ಯಾವೊಬ್ಬ ಇತರ ವ್ಯಕ್ತಿಯು ತನ್ನ ಹಕ್ಕುಗಳು ಮತ್ತು ಹಿತಾಸಕ್ತಿಯ ಅನುಸಾರವಾಗಿ 9ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಮತ್ತು 10ನೇ ಪ್ರಕರಣದ ಅಡಿಯಲ್ಲಿ ನಿರ್ಧರಿಸಲಾದ ಮೊಬಲಗಿನ ಪೈಕಿಯಿಂದ ಅಡಮಾನ ಹಣ [2][ಅಡಮಾನ ಹಣದ ಮೊಬಲಗು ಅಥವಾ ಇತರ ಬಾಕಿಗಳ][2] ಪೂರ್ಣ ಅಥವಾ ಭಾಗಶಃ ಸಂದಾಯಕ್ಕಾಗಿ ಕ್ಲೇಮು ಮಾಡಲು

ಹಕ್ಕುಳ್ಳವನಾಗಿರತಕ್ಕದ್ದು, ಆದರೆ ಅಂಥ ಅಡಮಾನ, ಚಾರ್ಜು, ಧಾರಣಾಧಿಕಾರ ಅಥವಾ ಇತರ ಹಿತಾಸಕ್ತಿಯು ಸರ್ಕಾರದಲ್ಲಿ ನಿಹಿತವಾಗಿರುವ ಯಾವುದೇ ಸ್ವತ್ತಿಗೆ ಪ್ರತಿಯಾಗಿ ಜಾರಿಗೊಳಿಸಬಹುದಾಗಿರತಕ್ಕದ್ದಲ್ಲ.

1. 2005ರ ಅಧಿನಿಯಮ ಸಂಖ್ಯೆ 20ರ ಮೂಲಕ ದಿನಾಂಕ: 30.06.1986 ರಿಂದ ಸೇರಿಸಲಾಗಿದೆ.
2. 2005ರ ಅಧಿನಿಯಮ ಸಂಖ್ಯೆ 20ರ ಮೂಲಕ ದಿನಾಂಕ: 30.06.1986 ರಿಂದ ಪ್ರತಿಯೋಜಿಸಲಾಗಿದೆ.

(5) 4ನೇ ಪ್ರಕರಣದ ಅಡಿಯಲ್ಲಿ ಸರ್ಕಾರದಲ್ಲಿ ನಿಹಿತವಾಗಿರುವ ಗಿರಣಿಗಳ ಸಂಬಂಧದಲ್ಲಿ ಗುತ್ತಿಗೆಗೆ ಕೊಡುವವನಿಗೆ ಅಥವಾ ಗುತ್ತಿಗೆದಾರನಿಗೆ ಗೊತ್ತುಪಡಿಸಲಾದ ದಿನಾಂಕದ ಮೊದಲು ಯಾವುದೇ ಸಮಯದಲ್ಲಿ ನೀಡಲಾದ ಮತ್ತು ಆ ದಿನಾಂಕದ ನಿಕಟ ಪೂರ್ವದಲ್ಲಿ ಜಾರಿಯಲ್ಲಿದ್ದ ಯಾವುದೇ ಲೈಸೆನ್ಸ್ ಅಥವಾ ಇತರ ಲಿಖಿತ ಪತ್ರವು ಗಿರಣಿಗಳಿಗೆ ಸಂಬಂಧಪಟ್ಟಂತೆ ಮತ್ತು ಅವುಗಳ ಉದ್ದೇಶಕ್ಕಾಗಿ ಅಂಥ ದಿನದಂದು ಮತ್ತು ಆ ದಿನದ ತರುವಾಯ ಅದರ ಕಾಲಾವಧಿಗೆ ಅನುಸಾರವಾಗಿ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು 8ನೇ ಪ್ರಕರಣದ ಅಡಿಯಲ್ಲಿ ಗಿರಣಿಗಳನ್ನು ಕಂಪನಿಯಲ್ಲಿ ನಿಹಿತಗೊಳಿಸುವ ದಿನಾಂಕದಂದು ಮತ್ತು ಅಂದಿನಿಂದ, ಅಂಥ ಲೈಸೆನ್ಸು ಅಥವಾ ಲಿಖಿತ ಪತ್ರದಲ್ಲಿ ಉಲ್ಲೇಖಿಸಲಾದ ಗುತ್ತಿಗೆಗೆ ಕೊಡುವವನ ಅಥವಾ ಗುತ್ತಿಗೆದಾರನ ಸ್ಥಾನದಲ್ಲಿ ಅಂಥ ಲೈಸೆನ್ಸು ಅಥವಾ ಲಿಖಿತ ಪತ್ರವನ್ನು ಕಂಪನಿಗೆ ನೀಡಲಾಗಿತ್ತು ಎಂಬಂತೆ ಕಂಪನಿಯನ್ನು ಪ್ರತಿಸ್ಥಾಪಿಸಿರುವುದಾಗಿ ಭಾವಿಸತಕ್ಕದ್ದು ಮತ್ತು ಕಂಪನಿಯು ಅದನ್ನು, ಗುತ್ತಿಗೆಗೆ ಕೊಡುವವನು ಅಥವಾ ಗುತ್ತಿಗೆದಾರನು ಅದರಲ್ಲಿರುವ ನಿಬಂಧನೆಗಳ ಮೇರೆಗೆ ಅದನ್ನು ಹೊಂದಿರಬಹುದಾಗಿದ್ದ ಉಳಿದ ಅವಧಿಯವರೆಗೆ ಹೊಂದಿರತಕ್ಕದ್ದು.

(6) ಗೊತ್ತುಪಡಿಸಲಾದ ದಿನಾಂಕದಂದು, 4ನೇ ಪ್ರಕರಣದ ಅಡಿಯಲ್ಲಿ ಸರ್ಕಾರದಲ್ಲಿ ನಿಹಿತವಾದ ಯಾವುದೇ ಸ್ವತ್ತಿಗೆ ಸಂಬಂಧಿಸಿದಂತೆ ಗಿರಣಿಗಳಿಂದ ಅಥವಾ ಅವುಗಳ ವಿರುದ್ಧವಾಗಿ ಹೂಡಲಾಗಿದ್ದ ಅಥವಾ ಸಲ್ಲಿಸಲಾಗಿದ್ದ ಇತ್ಯರ್ಥವಾಗದೇ ಉಳಿದಿರುವ ಯಾವುದೇ ದಾವೆ, ಅಪೀಲು ಅಥವಾ ಯಾವುದೇ ಸ್ವರೂಪದ ವ್ಯವಹರಣೆಯು, ಗಿರಣಿಗಳ ವರ್ಗಾವಣೆ ಅಥವಾ ಈ ಅಧಿನಿಯಮದಲ್ಲಿ ಒಳಗೊಂಡಿರುವ ಯಾವುದರ ಕಾರಣದಿಂದಾಗಿ ಕೊನೆಗೊಳ್ಳತಕ್ಕದ್ದಲ್ಲ, ಮುಂದುವರಿಯದಿರುವಂತಾಗತಕ್ಕದ್ದಲ್ಲ ಅಥವಾ ಇತರ ಯಾವುದೇ ರೀತಿಯಲ್ಲಿ ಪ್ರತಿಕೂಲ ಪರಿಣಾಮ ಹೊಂದತಕ್ಕದ್ದಲ್ಲ. ಆದರೆ ಸರ್ಕಾರದಿಂದ ಅಥವಾ ಸರ್ಕಾರದ ವಿರುದ್ಧವಾಗಿ ಅಥವಾ 8ನೇ ಪ್ರಕರಣದ ಅಡಿಯಲ್ಲಿ ಗಿರಣಿಗಳು ಕಂಪನಿಯಲ್ಲಿ ನಿಹಿತವಾಗಬೇಕೆಂದು ನಿರ್ದೇಶಿಸಿರುವಲ್ಲಿ, ಕಂಪನಿಯಿಂದ ಅಥವಾ ಕಂಪನಿಯ ವಿರುದ್ಧವಾಗಿ ದಾವೆ, ಅಪೀಲು ಅಥವಾ ಇತರ ವ್ಯವಹರಣೆಯನ್ನು ಮುಂದುವರಿಸಬಹುದು, ಅಭಿಯೋಜಿಸಬಹುದು ಅಥವಾ ಜಾರಿಗೊಳಿಸಬಹುದು.

**6. ಗುತ್ತಿಗೆಗೆ ಕೊಡುವವನು ಅಥವಾ ಗುತ್ತಿಗೆದಾರನು ಕೆಲವು ಹಿಂದಿನ ಹೊಣೆಗಳಿಗೆ ಬದ್ಧರಾಗಿರುವುದು.-** (1) (2)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಹೊಣೆಯಲ್ಲದೇ ಗೊತ್ತುಪಡಿಸಲಾದ ದಿನಾಂಕಕ್ಕಿಂತ ಹಿಂದಿನ ಯಾವುದೇ ಅವಧಿಗೆ ಸಂಬಂಧಪಟ್ಟಂತೆ, ಗಿರಣಿಗಳಿಗೆ ಸಂಬಂಧಿಸಿದಂತೆ ಗುತ್ತಿಗೆಗೆ ಕೊಡುವವನ ಅಥವಾ ಗುತ್ತಿಗೆದಾರನ ಪ್ರತಿಯೊಂದು ಹೊಣೆಯು ಸಂದರ್ಭಾನುಸಾರ, ಅಂಥ ಗುತ್ತಿಗೆಗೆ ಕೊಡುವವನ ಅಥವಾ ಗುತ್ತಿಗೆದಾರನ ಹೊಣೆಯಾಗಿರತಕ್ಕದ್ದು ಮತ್ತು ಅದನ್ನು ಅವನ ಪರವಾಗಿಯೇ ಹೊರತು ಸರ್ಕಾರದ ಪರವಾಗಿಯಾಗಲಿ ಅಥವಾ 8ನೇ ಪ್ರಕರಣದ ಅಡಿಯಲ್ಲಿ ಗಿರಣಿಗಳು ಕಂಪನಿಯಲ್ಲಿ ನಿಹಿತವಾಗಬೇಕೆಂದು ನಿರ್ದೇಶಿಸಲಾಗಿದ್ದಲ್ಲಿ ಕಂಪನಿಯ ಪರವಾಗಿಯಾಗಲಿ ಜಾರಿಗೊಳಿಸತಕ್ಕದ್ದಲ್ಲ.

(2) (ಎ) ಪ್ರಸ್ತುತ ವ್ಯವಸ್ಥಾಪನೆಯಿಂದ ತಗೆದುಕೊಂಡ ಸಾಲಗಳು (ಆದರ ಮೇಲಿನ ಬಡ್ಡಿಯೊಂದಿಗೆ);

(ಬಿ) ಸರ್ಕಾರವು ಗಿರಣಿಗಳ ವ್ಯವಸ್ಥಾಪನೆಯನ್ನು ವಹಿಸಿಕೊಂಡ ತರುವಾಯದ ಯಾವುದೇ ಅವಧಿಗೆ ಸಂಬಂಧಪಟ್ಟಂತೆ ಗಿರಣಿಗಳ ಉದ್ಯೋಗಿಗಳ ಮಜೂರಿ, ವೇತನಗಳು ಮತ್ತು ಇತರ ಬಾಕಿಗಳು,

- ಇವುಗಳ ಸಂಬಂಧದಲ್ಲಿ ಉದ್ಭವಿಸುವ ಯಾವುದೇ ಹೊಣೆಯು ಗೊತ್ತು ಪಡಿಸಲಾದ ದಿನಾಂಕದಂದು ಮತ್ತು ಆ ದಿನದಿಂದ ಸರ್ಕಾರದ ಹೊಣೆಯಾಗತಕ್ಕದ್ದು ಮತ್ತು 8ನೇ ಪ್ರಕರಣದ ಅಡಿಯಲ್ಲಿ ಕಂಪನಿಯಲ್ಲಿ ನಿಹಿತಗೊಳಿಸಿದ ದಿನಾಂಕದಂದು ಮತ್ತು ಆ ದಿನಾಂಕದಿಂದ ಕಂಪನಿಯ ಹೊಣೆಯಾಗತಕ್ಕದ್ದು ಮತ್ತು ಅಂಥ ಸಾಲಗಳು ಅಥವಾ ಮೊಬಲಗುಗಳ ಮರುಸಂದಾಯವಾಗಬೇಕಾದಾಗಲೆಲ್ಲಾ ಅಥವಾ ಅಂಥ ಮಜೂರಿಗಳು, ವೇತನಗಳು ಅಥವಾ ಇತರ ಬಾಕಿಗಳು ಸಂದೇಯವಿರುವಾಗಲೆಲ್ಲಾ ಕಂಪನಿಯು ನಿರ್ವಹಿಸತಕ್ಕದ್ದು.

(3) ಸಂದೇಹಗಳ ನಿವಾರಣೆಗಾಗಿ,-

(ಎ) ಅಧಿನಿಯಮದ ಈ ಪ್ರಕರಣದಲ್ಲಿ ಅಥವಾ ಇತರ ಯಾವುದೇ ಪ್ರಕರಣದಲ್ಲಿ ಸ್ಪಷ್ಟವಾಗಿ ಉಪಬಂಧಿಸಿರುವುದನ್ನುಳಿದು, (2)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಹೊಣೆಯಲ್ಲದೇ ಗೊತ್ತುಪಡಿಸಲಾದ ದಿನಾಂಕಕ್ಕಿಂಕ ಹಿಂದಿನ ಯಾವುದೇ ಅವಧಿಗೆ ಸಂಬಂಧಪಟ್ಟಂತೆ ಗಿರಣಿಗಳ ಸಂಬಂಧದಲ್ಲಿ ಗುತ್ತಿಗೆಗೆ ಕೊಡುವವನ ಅಥವಾ ಗುತ್ತಿಗೆದಾರನ ಯಾವುದೇ ಹೊಣೆಯನ್ನು ಸರ್ಕಾರದ ಪರವಾಗಿಯಾಗಲಿ ಅಥವಾ 8ನೇ ಪ್ರಕರಣದ ಅಡಿಯಲ್ಲಿ ಗಿರಣಿಗಳು ಕಂಪನಿಯಲ್ಲಿ ನಿಹಿತವಾಗಬೇಕೆಂದು ನಿರ್ದೇಶಿಸಿರುವಲ್ಲಿ, ಕಂಪನಿಯ ಪರವಾಗಿಯಾಗಲಿ ಜಾರಿಗೊಳಿಸತಕ್ಕದ್ದಲ್ಲ;

(ಬಿ) ಗಿರಣಿಗಳಿಗೆ ಸಂಬಂಧಿಸಿದಂತೆ ಗೊತ್ತುಪಡಿಸಲಾದ ದಿನಾಂಕಕ್ಕಿಂತ ಮುಂಚೆ ಉದ್ಭವಿಸಿದ, (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿರದ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಯಾವುದೇ ವಿಷಯ, ಕ್ಲೇಮು ಅಥವಾ ವಿವಾದದ ಸಂಬಂಧದಲ್ಲಿ ಗೊತ್ತುಪಡಿಸಲಾದ ದಿನಾಂಕದ ತರುವಾಯ ಹೊರಡಿಸಲಾದ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಐತೀರ್ಪು, ಡಿಕ್ರಿ ಅಥವಾ ಆದೇಶವನ್ನು ಸರ್ಕಾರದ ಪರವಾಗಿಯಾಗಲಿ ಅಥವಾ 8ನೇ ಪ್ರಕರಣದ ಅಡಿಯಲ್ಲಿ ಗಿರಣಿಗಳು ಕಂಪನಿಯಲ್ಲಿ ನಿಹಿತವಾಗಬೇಕೆಂದು ನಿರ್ದೇಶಿಸಿರುವಲ್ಲಿ ಕಂಪನಿಯ ಪರವಾಗಿಯಾಗಲಿ ಜಾರಿಗೊಳಿಸತಕ್ಕದ್ದಲ್ಲ;

(ಸಿ) ಗೊತ್ತುಪಡಿಸಲಾದ ದಿನಾಂಕಕ್ಕೆ ಮೊದಲು ಗುತ್ತಿಗೆಗೆ ಕೊಡುವವನು ಅಥವಾ ಗುತ್ತಿಗೆದಾರನು ಭರಿಸಿದ ಯಾವುದೇ ಹೊಣೆಯನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಯಾವುದೇ ಉಪಬಂಧದ ಉಲ್ಲಂಘನೆಗಾಗಿ, ಸರ್ಕಾರದ ಪರವಾಗಿಯಾಗಲಿ ಅಥವಾ 8ನೇ ಪ್ರಕರಣದ ಅಡಿಯಲ್ಲಿ ಗಿರಣಿಗಳು ಕಂಪನಿಯಲ್ಲಿ ನಿಹಿತವಾಗಬೇಕೆಂದು ನಿರ್ದೇಶಿಸಿರುವಲ್ಲಿ, ಕಂಪನಿಯ ಪರವಾಗಿಯಾಗಲಿ ಜಾರಿಗೊಳಿಸತಕ್ಕದ್ದಲ್ಲ.

**7. ಹಿಂದಿನ ಮಜೂರಿ ಮುಂತಾದವುಗಳನ್ನು ವಸೂಲು ಮಾಡಲು ಸರ್ಕಾರಕ್ಕಿರುವ ಹಕ್ಕು.-** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಪ್ರಸ್ತುತ ವ್ಯವಸ್ಥಾಪನೆಯು, ಗುತ್ತಿಗೆಗೆ ಕೊಡುವವನ ಅಥವಾ ಗುತ್ತಿಗೆದಾರನ ಪರವಾಗಿ ಗಿರಣಿಗಳ ಅಧಿಕಾರಿಗಳು ಅಥವಾ ಇತರ ನೌಕರರಿಗೆ ಹಿಂದಿನ ಮಜೂರಿ, ಉಪದಾನ, ನಿವೃತ್ತಿ ಸೌಲಭ್ಯಗಳು ಮತ್ತು ಇತರ ಬಾಕಿಗಳಿಗಾಗಿ ಸಂದಾಯಮಾಡಿದ ಎಲ್ಲ ಮೊಬಲಗುಗಳನ್ನು ಗುತ್ತಿಗೆಗೆ ಕೊಡುವವನಿಂದ ಅಥವಾ ಗುತ್ತಿಗೆದಾರನಿಂದ ಭೂ ಕಂದಾಯದ ಬಾಕಿ ಎಂಬಂತೆ ವಸೂಲು ಮಾಡಲು ಸರ್ಕಾರಕ್ಕೆ ಹಕ್ಕಿರತಕ್ಕದ್ದು.

**8. ಗಿರಣಿಗಳನ್ನು ಕಂಪನಿಯಲ್ಲಿ ನಿಹಿತಗೊಳಿಸುವಂತೆ ನಿರ್ದೇಶಿಸಲು ಸರ್ಕಾರಕ್ಕಿರುವ ಅಧಿಕಾರ.-** (1) 4 ಮತ್ತು 5ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಸರ್ಕಾರವು, ವಿಧಿಸಲು ಸೂಕ್ತವೆಂದು ತಾನು ಭಾವಿಸುವ ಅಂಥ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು, ಅಧಿಸೂಚನೆಯ ಮೂಲಕ, 4ನೇ ಪ್ರಕರಣದ

ಅಡಿಯಲ್ಲಿ ಸರ್ಕಾರದಲ್ಲಿ ನಿಹಿತವಾಗಿದ್ದ ಗಿರಣಿಗಳು ಸರ್ಕಾರದಲ್ಲಿ ನಿಹಿತವಾಗಿರುವುದು ಮುಂದುವರಿಯುವ ಬದಲು ಅಧಿಸೂಚನೆಯ ದಿನಾಂಕದಂದು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾಂತೆ ಅಂಥ ಮುಂಚಿನ ಅಥವಾ ತರುವಾಯದ ದಿನಾಂಕದಂದು (ಗೊತ್ತುಪಡಿಸಲಾದ ದಿನಾಂಕಕ್ಕಿಂತ ಮುಂಚಿನ ದಿನಾಂಕವಲ್ಲದ) ಕಂಪನಿಯಲ್ಲಿ ನಿಹಿತವಾಗತಕ್ಕದ್ದೆಂದು ನಿರ್ದೇಶಿಸಬಹುದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಗಿರಣಿಗಳಿಗೆ ಸಂಬಂಧಿಸಿದಂತೆ ಅದರ ಹಕ್ಕು, ಸ್ವಾಮ್ಯ ಮತ್ತು ಹಿತಾಸಕ್ತಿಗಳು ಕಂಪನಿಯಲ್ಲಿ ನಿಹಿತವಾಗಿರುವಲ್ಲಿ ಅಂಥ ನಿಹಿತಗೊಳಿಸುವಿಕೆಯ ದಿನಾಂಕದಂದು ಮತ್ತು ಅಂದಿನಿಂದ ಕಂಪನಿಯು ಅಂಥ ಗಿರಣಿಗಳಿಗೆ ಸಂಬಂಧಿಸಿದಂತೆ, ಮಾಲೀಕನಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಗಿರಣಿಗಳಿಗೆ ಸಂಬಂದಿಸಿದಂತೆ ಸರ್ಕಾರದವುಗಳಾಗಿದ್ದ ಎಲ್ಲಾ ಹಕ್ಕುಗಳು ಮತ್ತು ಹೊಣೆಗಳು, ಅಧಿನಿಯಮದ ಅಡಿಯಲ್ಲಿ ಉಪಬಂಧಿಸಲಾದಂತೆ ಅಂಥ ನಿಹಿತಗೊಳಿಸುವಿಕೆಯ ದಿನಾಂಕದಂದು ಮತ್ತು ಅಂದಿನಿಂದ ಕಂಪನಿಯ ಹಕ್ಕುಗಳು ಮತ್ತು ಹೊಣೆಗಳಾಗಿವೆಯೆಂದು ಭಾವಿಸತಕ್ಕದ್ದು.

## ಅಧ್ಯಾಯ III

## ಮೊಬಲಗುಗಳ ಸಂದಾಯ

**9. ಗುತ್ತಿಗೆಗೆ ಕೊಡುವವನು, ಗುತ್ತಿಗೆದಾರ ಮತ್ತು ಇತರ ಹಿತಾಸಕ್ತ ವ್ಯಕ್ತಿಗಳಿಗೆ ಕೊಡಬೇಕಾಗಿರುವ ಮೊಬಲಗು.-** 4ನೇ ಪ್ರಕರಣದ ಅಡಿಯಲ್ಲಿ ಗಿರಣಿಗಳನ್ನು ಮತ್ತು ಗಿರಣಿಗಳಿಗೆ ಸಂಬಂಧಿಸಿದ ಹಕ್ಕುಗಳು ಮತ್ತು ಹಿತಾಸಕ್ತಿಯನ್ನು ಸರ್ಕಾರಕ್ಕೆ ವರ್ಗಾವಣೆ ಮಾಡಲು ಮತ್ತು ಅದರಲ್ಲಿ ನಿಹಿತವಾಗಿಸಲು, ಸರ್ಕಾರವು 446.59 ಲಕ್ಷ ರೂಪಾಯಿಗಳನ್ನು ಕಮೀಷನರಲ್ಲಿ ಠೇವಣಿ ಇಟ್ಟು, ಸಂದಾಯ ಮಾಡತಕ್ಕದ್ದು ಮತ್ತು ಸದರಿ ಮೊಬಲಗನ್ನು Vನೇ ಅಧ್ಯಾಯದಲ್ಲಿ ನಿರ್ದಿಷ್ಟಪಡಿಸಿರುವ ರೀತಿಯಲ್ಲಿ, ಗುತ್ತಿಗೆಗೆ ಕೊಡುವವನು, ಗುತ್ತಿಗೆದಾರ [1][ಅಥವಾ ಅದಕ್ಕೆ ಹಕ್ಕುಳ್ಳ ಭೂಮಿಯ ಒಡೆಯ ಅಥವಾ ಅಂಥ ಇತರ ವ್ಯಕ್ತಿಗಳಿಗೆ][1] ಸಂದಾಯ ಮಾಡತಕ್ಕದ್ದು.

1. 2005ರ ಅಧಿನಿಯಮ ಸಂಖ್ಯೆ 20ರ ಮೂಲಕ ದಿನಾಂಕ: 30.06.1986 ರಿಂದ ಪ್ರತಿಯೋಜಿಸಲಾಗಿದೆ.

**10. ಹೆಚ್ಚಿನ ಮೊಬಲಗುಗಳ ಸಂದಾಯ.-** (1) 9ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಮೊಬಲಗಿನ ಮೇಲೆ ಗೊತ್ತುಪಡಿಸಲಾದ ದಿನಾಂಕದಿಂದ ಆರಂಭವಾಗಿ ಸರ್ಕಾರವು ಕಮೀಷನರಿಗೆ ಅಂಥ ಮೊಬಲಗನ್ನು ಸಂದಾಯ ಮಾಡಿದ ದಿನಾಂಕದಂದು ಮುಕ್ತಾಯವಾಗುವ ಅವಧಿಯವರೆಗೆ ವರ್ಷಕ್ಕೆ ಶೇಕಡಾ 4ರ ದರದಲ್ಲಿ ಸರಳ ಬಡ್ಡಿಯು ಬರತಕ್ಕದ್ದು.

(2) ಸರ್ಕಾರವು, ಸಂದರ್ಭಾನುಸಾರ, ಗುತ್ತಿಗೆಗೆ ಕೊಡುವವನು, ಗುತ್ತಿಗೆದಾರ [1][ಅಥವಾ ಅದಕ್ಕೆ ಹಕ್ಕುಳ್ಳ ಭೂಮಿಯ ಒಡೆಯ ಅಥವಾ ಅಂಥ ಇತರ ವ್ಯಕ್ತಿಗಳಿಗೆ][1] 9ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಮೊಬಲಗಿನ ಜೊತೆಗೆ (1)ನೇ ಉಪಪ್ರಕರಣದ ಉಪಬಂಧಗಳಿಗನುಸಾರವಾಗಿ ನಿರ್ಧರಿಸಲಾದ ಮೊಬಲಗನ್ನು ನೀಡತಕ್ಕದ್ದು.

1. 2005ರ ಅಧಿನಿಯಮ ಸಂಖ್ಯೆ 20ರ ಮೂಲಕ ದಿನಾಂಕ: 30.06.1986 ರಿಂದ ಪ್ರತಿಯೋಜಿಸಲಾಗಿದೆ.

(3) ಸಂದೇಹಗಳ ನಿವಾರಣೆಗಾಗಿ 4ನೇ ಪ್ರಕರಣದ ಅಡಿಯಲ್ಲಿ ಸರ್ಕಾರದಲ್ಲಿ ನಿಹಿತವಾಗಿದ್ದ ಗಿರಣಿಗಳ ಸಂಬಂಧದಲ್ಲಿಯ ಗುತ್ತಿಗೆಗೆ ಕೊಡುವವನ ಅಥವಾ ಗುತ್ತಿಗೆದಾರನ ಹೊಣೆಯನ್ನು 9ನೇ ಪ್ರಕರಣದಲ್ಲಿ ಉಲ್ಲಿಖಿತವಾದ ಮೊಬಲಗಿನಿಂದ ಮತ್ತು ಸಂದರ್ಭಾನುಸಾರ, ಗುತ್ತಿಗೆಗೆ ಕೊಡುವವನ ಅಥವಾ ಗುತ್ತಿಗೆದಾರನ ಸಾಲಿಗರ ಹಕ್ಕುಗಳು ಮತ್ತು ಹಿತಾಸಕ್ತಿಗಳಿಗನುಸಾರವಾಗಿ (1)ನೇ ಉಪಪ್ರಕರಣದ ಅಡಿಯಲ್ಲಿ ನಿರ್ಧರಿಸಲಾದ ಮೊಬಲಗುಗಳಿಂದ ಸಹ ನಿರ್ವಹಿಸತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ.

## ಅಧ್ಯಾಯ IV

## ಗಿರಣಿಗಳ ವ್ಯವಸ್ಥಾಪನೆ

**11. ಗಿರಣಿಗಳ ವ್ಯವಸ್ಥಾಪನೆ ಮುಂತಾದವುಗಳು.-** 4ನೇ ಪ್ರಕರಣದ ಅಡಿಯಲ್ಲಿ ಸರ್ಕಾರದಲ್ಲಿ ನಿಹಿತಗೊಂಡಿರುವ ಗಿರಣಿಗಳ ಸಂಬಂಧದಲ್ಲಿ ಗಿರಣಿಗಳ ವ್ಯವಹಾರ ಹಾಗೂ ಕಾರ್ಯಕಲಾಪಗಳ ಸಾಮಾನ್ಯ ಅಧೀಕ್ಷಣೆ, ನಿರ್ದೇಶನ, ನಿಯಂತ್ರಣ ಮತ್ತು ವ್ಯವಸ್ಥಾಪನೆ, ಹಕ್ಕು, ಸ್ವಾಮ್ಯ ಮತ್ತು ಹಿತಾಸಕ್ತಿ- ಇವುಗಳು 8ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಸರ್ಕಾರವು ನಿರ್ದೇಶನ ನೀಡಿದ್ದರೆ, ಕಂಪನಿಯಲ್ಲಿ ನಿಹಿತವಾಗತಕ್ಕದ್ದು ಮತ್ತು ತದನಂತರ, ಇತರ ಎಲ್ಲ ವ್ಯಕ್ತಿಗಳನ್ನು ಹೊರತುಪಡಿಸಿ, ಕಂಪನಿಯು, ಗಿರಣಿಗಳ ಸಂಬಂಧದಲ್ಲಿ ಅಧಿಕಾರ ಚಲಾಯಿಸಲು ಹಾಗೂ ಕಾರ್ಯ ಮಾಡಲು ಕಂಪನಿಗೆ ಪ್ರಾಧಿಕೃತಗೊಳಿಸಲಾದ ಅಂಥ ಎಲ್ಲ ಅಧಿಕಾರಗಳನ್ನು ಚಲಾಯಿಸಲು ಹಾಗೂ ಅಂಥ ಎಲ್ಲ ಕಾರ್ಯಗಳನ್ನು ಮಾಡಲು ಹಕ್ಕುಳ್ಳದ್ದಾಗಿರತಕ್ಕದ್ದು.

**12. ಗಿರಣಿಗಳ ವ್ಯವಸ್ಥಾಪನೆಯ ಪ್ರಭಾರದಲ್ಲಿರುವ ವ್ಯಕ್ತಿಗಳ ಕರ್ತವ್ಯಗಳು.-** ಗಿರಣಿಗಳ ವ್ಯವಸ್ಥಾಪನೆಯು ಕಂಪನಿಯಲ್ಲಿ ನಿಹಿತವಾದ ಮೇಲೆ ಅಂಥ ನಿಹಿತಗೊಳಿಸುವಿಕೆಯ ನಿಕಟಪೂರ್ವದಲ್ಲಿ ಗಿರಣಿಗಳ ವ್ಯವಸ್ಥಾಪನೆಯ ಪ್ರಭಾರದಲ್ಲಿರುವ ಎಲ್ಲ ವ್ಯಕ್ತಿಗಳು, ಗಿರಣಿಗಳಿಗೆ ಸಂಬಂಧಿಸಿದ ತಮ್ಮ ಅಭಿರಕ್ಷೆಯಲ್ಲಿರುವ ಎಲ್ಲ ಆಸ್ತಿಗಳು, ಲೆಕ್ಕಪುಸ್ತಕಗಳು, ರಿಜಿಸ್ಟರುಗಳು ಅಥವಾ ಇತರ ದಸ್ತಾವೇಜುಗಳನ್ನು ಕಂಪನಿಗೆ ಒಪ್ಪಿಸಲು ಬದ್ಧರಾಗಿರತಕ್ಕದ್ದು.

(2) ಸರ್ಕಾರವು, ಸಂದರ್ಭಾನುಗುಣ ಸನ್ನಿವೇಶಗಳಲ್ಲಿ ಅಪೇಕ್ಷಣೀಯವೆಂದು ತಾನು ಭಾವಿಸಬಹುದಾದ ಅಂಥ ನಿರ್ದೇಶನಗಳನ್ನು ಕಂಪನಿಗೆ ನೀಡಬಹುದು ಮತ್ತು ಕಂಪನಿಯೂ ಸಹ ತನಗೆ ಅವಶ್ಯಕವೆಂದು ಕಂಡುಬಂದರೆ, ಗಿರಣಿಗಳ ವ್ಯವಸ್ಥಾಪನೆಯನ್ನು ಕೈಗೊಳ್ಳಬೇಕಾದ ರೀತಿಯ ಬಗ್ಗೆ ಅಥವಾ ಅಂಥ ವ್ಯವಸ್ಥಾಪನೆಯ ಕ್ರಮದಲ್ಲಿ ಉದ್ಭವಿಸಬಹುದಾದ ಯಾವುದೇ ಇತರ ವಿಷಯದ ಸಂಬಂಧದಲ್ಲಿ ಸೂಚನೆಗಳಿಗಾಗಿ ಸರ್ಕಾರಕ್ಕೆ ಯಾವುದೇ ಕಾಲದಲ್ಲಿ ಬರೆದು ಕೇಳಬಹುದು.

**13. ತಮ್ಮ ಸ್ವಾಧೀನದಲ್ಲಿರುವ ಆಸ್ತಿ ಮುಂತಾದವುಗಳ ಲೆಕ್ಕ ನೀಡಲು ವ್ಯಕ್ತಿಗಳ ಕರ್ತವ್ಯಗಳು.-** (1) ಈ ಅಧಿನಿಯಮದ ಅಡಿಯಲ್ಲಿ ಸರ್ಕಾರದಲ್ಲಿ ಅಥವಾ ಕಂಪನಿಯಲ್ಲಿ ನಿಹಿತವಾಗಿರುವ ಗಿರಣಿಗಳಿಗೆ ಸಂಬಂಧಿಸಿದ ಅಥವಾ ಗಿರಣಿಗಳು ಸರ್ಕಾರದಲ್ಲಿ ಅಥವಾ ಕಂಪನಿಯಲ್ಲಿ ನಿಹಿತವಾಗಿರದಿದ್ದರೆ, ಗಿರಣಿಗೆ ಸೇರಿರುತ್ತಿದ್ದ ಅಥವಾ ಹಾಗೆ ಸೇರಬಹುದಾಗಿದ್ದ ಎಲ್ಲ ಆಸ್ತಿಗಳು, ಪುಸ್ತಕಗಳು, ದಸ್ತಾವೇಜುಗಳು ಅಥವಾ ಇತರ ಕಾಗದಪತ್ರಗಳನ್ನು ಗೊತ್ತುಪಡಿಸಿದ ದಿನಾಂಕದಂದು ತನ್ನ ಸ್ವಾಧೀನತೆ ಅಥವಾ ನಿಯಂತ್ರಣದಲ್ಲಿ ಹೊಂದಿರುವ ಯಾವೊಬ್ಬ ವ್ಯಕ್ತಿಯು ಸದರಿ ಆಸ್ತಿಗಳು, ಪುಸ್ತಕಗಳು, ದಸ್ತಾವೇಜುಗಳು ಮತ್ತು ಇತರ ಕಾಗದಪತ್ರಗಳ ಬಗ್ಗೆ ಸರ್ಕಾರಕ್ಕೆ ಅಥವಾ ಕಂಪನಿಗೆ ಅಥವಾ ಈ ಬಗ್ಗೆ ಸರ್ಕಾರ ಅಥವಾ ಕಂಪನಿಯು ನಿರ್ದಿಷ್ಟಪಡಿಸಬಹುದಾದ ಅಂಥ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಲೆಕ್ಕ ನೀಡಲು ಬದ್ಧನಾಗಿರತಕ್ಕದ್ದು.

(2) ಸರ್ಕಾರ ಅಥವಾ ಕಂಪನಿಯು, ಈ ಅಧಿನಿಯಮದ ಅಡಿಯಲ್ಲಿ ಸರ್ಕಾರದಲ್ಲಿ ಅಥವಾ ಕಂಪನಿಯಲ್ಲಿ ನಿಹಿತವಾದ ಗಿರಣಿಗಳ ಸ್ವಾಧೀನತೆಯನ್ನು ಪಡೆಯಲು ಎಲ್ಲ ಅವಶ್ಯಕ ಕ್ರಮಗಳನ್ನು ಕೈಗೊಳ್ಳಬಹುದು ಅಥವಾ ಕೈಗೊಳ್ಳುವಂತೆ ಮಾಡಬಹುದು.

(3) 4ನೇ ಪ್ರಕರಣದ ಅಡಿಯಲ್ಲಿ ಸರ್ಕಾರದಲ್ಲಿ ನಿಹಿತವಾದ, ಗಿರಣಿಗಳಿಗೆ ಸಂಬಂಧಿಸಿದ ಎಲ್ಲ ಸ್ವತ್ತುಗಳು ಮತ್ತು ಆಸ್ತಿಗಳ ಬಗ್ಗೆ, ಸಂದರ್ಭಾನುಸಾರ, ಗುತ್ತಿಗೆಗೆ ಕೊಡುವವನು ಅಥವಾ ಗುತ್ತಿಗೆದಾರನು ಈ ಸಂಬಂಧದಲ್ಲಿ ಸರ್ಕಾರವು ಅನುಮತಿಸಬಹುದಾದ ಅಂಥ ಅವಧಿಯೊಳಗಾಗಿ, ಗೊತ್ತುಪಡಿಸಲಾದ ದಿನಾಂಕದಂದು ಒಂದು ಪೂರ್ಣವಾದ ವಿವರಣಾಪಟ್ಟಿಯನ್ನು ಒದಗಿಸತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ, ಸರ್ಕಾರ ಅಥವಾ ಕಂಪನಿಯು ಗುತ್ತಿಗೆಗೆ ಕೊಡುವವನಿಗೆ ಅಥವಾ ಗುತ್ತಿಗೆದಾರನಿಗೆ ಎಲ್ಲ ಉಚಿತ ಸೌಕರ್ಯಗಳನ್ನು ಒದಗಿಸತಕ್ಕದ್ದು.

**14. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.-** ಕಂಪನಿಯು, ಕಂಪನಿಗಳ ಅಧಿನಿಯಮ, 1956ರ ಉಪಬಂಧಗಳಿಗನುಸಾರವಾಗಿ ಗಿರಣಿಗಳ ಲೆಕ್ಕಪತ್ರಗಳನ್ನು ನಿರ್ವಹಿಸತಕ್ಕದ್ದು.

## ಅಧ್ಯಾಯ-V

## ಸಂದಾಯಗಳ ಕಮೀಷನರು

**15. ಸಂದಾಯಗಳ ಕಮೀಷನರ ನೇಮಕಾತಿ.-** (1) ಸರ್ಕಾರವು 9 ಮತ್ತು 10ನೇ ಪ್ರಕರಣಗಳ ಅಡಿಯಲ್ಲಿ ಸಂದೇಯವಿರುವ ಮೊಬಲಗುಗಳ ಬಟವಾಡೆಯ ಉದ್ದೇಶಕ್ಕಾಗಿ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚಿಸುವ ಮೂಲಕ ಸಂದಾಯಗಳ ಕಮೀಷನರನ್ನು ನೇಮಿಸತಕ್ಕದ್ದು.

(2) ಸರ್ಕಾರವು ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಇತರ ವ್ಯಕ್ತಿಗಳನ್ನು ಕಮೀಷನರ ಸಹಾಯಕ್ಕಾಗಿ ನೇಮಿಸಬಹುದು ಮತ್ತು ತದನಂತರ ಕಮೀಷನರು ಈ ಅಧಿನಿಯಮದ ಅಡಿಯಲ್ಲಿ ತಾನು ಚಲಾಯಿಸಬಹುದಾದ ಎಲ್ಲ ಅಥವಾ ಯಾವುವೇ ಅಧಿಕಾರಗಳನ್ನು ಚಲಾಯಿಸಲು ಅಂಥ ಒಬ್ಬ ಅಥವಾ ಹೆಚ್ಚಿನ ವ್ಯಕ್ತಿಗಳನ್ನು ಸಹ ಪ್ರಾಧಿಕೃತಗೊಳಿಸಬಹುದು ಮತ್ತು ವಿವಿಧ ಅಧಿಕಾರಗಳನ್ನು ಚಲಾಯಿಸಲು ಬೇರೆ ಬೇರೆ ವ್ಯಕ್ತಿಗಳನ್ನು ಪ್ರಾಧಿಕೃತಗೊಳಿಸಬಹುದು.

(3) ಕಮೀಷನರು ಚಲಾಯಿಸಬಹುದಾದ ಯಾವುವೇ ಅಧಿಕಾರಗಳನ್ನು ಚಲಾಯಿಸಲು ಕಮೀಷನರಿಂದ ಪ್ರಾಧಿಕೃತನಾದ ಯಾವೊಬ್ಬ ವ್ಯಕ್ತಿಯು ಆ ಅಧಿಕಾರಗಳನ್ನು, ಅವು ಪ್ರಾಧಿಕರಣಗೊಳಿಸುವಿಕೆಯಿಂದಲ್ಲದೆ ಈ ಅಧಿನಿಯಮದಿಂದ ತನಗೆ ನೇರವಾಗಿ ಪ್ರದತ್ತವಾಗಿವೆಯೋ ಎಂಬಂತೆ ಅದೇ ರೀತಿಯಲ್ಲಿ ಮತ್ತು ಅದೇ ಪರಿಣಾಮವಾಗುವಂತೆ, ಚಲಾಯಿಸಬಹುದು.

(4) ಈ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಕಮೀಷನರು ಮತ್ತು ಇತರ ವ್ಯಕ್ತಿಗಳ ವೇತನಗಳು ಮತ್ತು ಭತ್ಯಗಳನ್ನು ರಾಜ್ಯದ ಸಂಚಿತ ನಿಧಿಯಿಂದ ಭರಿಸತಕ್ಕದ್ದು.

**16. ಕಮೀಷನರಿಗೆ ಸರ್ಕಾರದಿಂದ ಸಂದಾಯ.-** (1) ಸರ್ಕಾರವು, ನಿರ್ದಿಷ್ಟಪಡಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ, ಕಮೀಷನರಲ್ಲಿ,-

(ಎ) 9ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಮೊಬಲಗಿಗೆ ಸಮನಾದ ಮೊಬಲಗು; ಮತ್ತು

(ಬಿ) 10ನೇ ಪ್ರಕರಣದ ಅಡಿಯಲ್ಲಿ ಸಂದೇಯವಿರುವ ಮೊಬಲಗಿಗೆ ಸಮನಾದ ಮೊಬಲಗು,

- ಇವುಗಳನ್ನು ಗುತ್ತಿಗೆಗೆ ಕೊಡುವವನು, ಗುತ್ತಿಗೆದಾರ [1][ಭೂಮಿಯ ಒಡೆಯನ ಮತ್ತು ಇತರ ಹಿತಾಸಕ್ತ ವ್ಯಕ್ತಿಗಳಿಗೆ][1] ಸಂದಾಯ ಮಾಡುವುದಕ್ಕಾಗಿ ನಗದು ರೂಪದಲ್ಲಿ ಠೇವಣಿ ಇಡತಕ್ಕದ್ದು.

1. 2005ರ ಅಧಿನಿಯಮ ಸಂಖ್ಯೆ 20ರ ಮೂಲಕ ದಿನಾಂಕ: 30.06.1986 ರಿಂದ ಪ್ರತಿಯೋಜಿಸಲಾಗಿದೆ.

(2) ಸರ್ಕಾರವು ರಾಜ್ಯದ ಸರ್ಕಾರಿ ಖಾತೆಯಲ್ಲಿ ಕಮೀಷನರ ಹೆಸರಿನಲ್ಲಿ ಒಂದು ಠೇವಣಿ ಖಾತೆಯನ್ನು ಆರಂಭಿಸತಕ್ಕದ್ದು ಮತ್ತು ಈ ಅಧಿನಿಯಮದ ಅಡಿಯಲ್ಲಿ ಕಮೀಷನರಿಗೆ ಸಂದಾಯ ಮಾಡಲಾದ ಪ್ರತಿಯೊಂದು ಮೊಬಲಗನ್ನು, ಕಮೀಷನರು ಸದರಿ ಠೇವಣಿ ಖಾತೆಯ ಲೆಕ್ಕಕ್ಕೆ ಜಮೆ ಮಾಡತಕ್ಕದ್ದು ಮತ್ತು ಸದರಿ ಠೇವಣಿ ಖಾತೆಯನ್ನು ಕಮೀಷನರು ನಿರ್ವಹಿಸತಕ್ಕದ್ದು.

(3) ಈ ಅಧಿನಿಯಮದ ಅಡಿಯಲ್ಲಿ ಕಮೀಷನರು ಗಿರಣಿಗಳಿಗೆ ಸಂಬಂಧಿಸಿದಂತೆ ತನಗೆ ಮಾಡಲಾದ ಸಂದಾಯಗಳ ಸಂಬಂಧದಲ್ಲಿ ದಾಖಲೆಗಳನ್ನು ಇಡತಕ್ಕದ್ದು.

(4) (2)ನೇ ಉಪ-ಪ್ರಕರಣದಲ್ಲಿ ಉಲ್ಲಿಖಿತವಾದ ರೇವಣಿ ಖಾತೆಗೆ ಜಮೆಯಾದ ಮೊಬಲಗಿನಿಂದ ಪ್ರಾಪ್ತವಾಗುವ ಬಡ್ಡಿಯು, ಗುತ್ತಿಗೆಗೆ ಕೊಡುವವನ, ಗುತ್ತಿಗೆದಾರನ ಮತ್ತು [1][ಭೂಮಿಯ ಒಡೆಯನ ಮತ್ತು ಇತರ ಹಿತಾಸಕ್ತ ವ್ಯಕ್ತಿಗಳಿಗೆ][1] ಸೌಲಭ್ಯವನ್ನು ಖಚಿತಪಡಿಸತಕ್ಕದ್ದು.

1. 2005ರ ಅಧಿನಿಯಮ ಸಂಖ್ಯೆ 20ರ ಮೂಲಕ ದಿನಾಂಕ: 30.06.1986 ರಿಂದ ಪ್ರತಿಯೋಜಿಸಲಾಗಿದೆ.

**17. ಸರ್ಕಾರ ಮತ್ತು ಕಂಪನಿಯ ಕೆಲವೊಂದು ಅಧಿಕಾರಗಳು.-** (1) ಸರ್ಕಾರ ಅಥವಾ ಕಂಪನಿಯಲ್ಲಿ ನಿಹಿತವಾಗಿರುವ ಗಿರಣಿಗಳ ಸಂಬಂಧದಲ್ಲಿ, ಇತರ ಎಲ್ಲ ವ್ಯಕ್ತಿಗಳನ್ನು ಹೊರತುಪಡಿಸಿ ಗುತ್ತಿಗೆಗೆ ಕೊಡುವವನು ಅಥವಾ ಗುತ್ತಿಗೆದಾರನಿಗೆ ಬಾಕಿ ಇರುವ ಮತ್ತು ಗೊತ್ತುಪಡಿಸಲಾದ ಹಿಂದಿನ ಅವಧಿಗೆ ಸಂಬಂಧಿಸಿದ ವಸೂಲಿಯಾಗಿದ್ದರೂ, ಗೊತ್ತುಪಡಿಸಲಾದ ದಿನಾಂಕದ ತರುವಾಯ ವಸೂಲಿಯಾದ ಯಾವುದೇ ಹಣವನ್ನು ನಿರ್ದಿಷ್ಟಪಡಿಸಲಾದ ದಿನಾಂಕದವರೆಗೆ, ಸಂದರ್ಭಾನುಸಾರ, ಸರ್ಕಾರ ಅಥವಾ ಕಂಪನಿಯು ಸ್ವೀಕರಿಸಲು ಹಕ್ಕುಳ್ಳದ್ದಾಗಿರತಕ್ಕದ್ದು.

(2) ಗೊತ್ತುಪಡಿಸಲಾದ ದಿನಾಂಕಕ್ಕೆ ಹಿಂದಿನ ಯಾವುದೇ ಅವಧಿಯ ಸಂಬಂಧದಲ್ಲಿ ಗಿರಣಿಗೆ ಸಂಬಂಧಿಸಿದಂತೆ ಗುತ್ತಿಗೆಗೆ ಕೊಡುವವನ ಅಥವಾ ಗುತ್ತಿಗೆದಾರನ ಯಾವುದೇ ಹೊಣೆಯನ್ನು ನಿರ್ವಹಿಸಲು, ಗೊತ್ತುಪಡಿಸಲಾದ ದಿನಾಂಕದ ತರುವಾಯ, ಸರ್ಕಾರ ಅಥವಾ ಕಂಪನಿಯಿಂದ ಮಾಡಲಾದ ಪ್ರತಿಯೊಂದು ಸಂದಾಯಕ್ಕೆ ಸಂಬಂಧಿಸಿದಂತೆ, ಸಂದರ್ಭಾನುಸಾರ, ಸರ್ಕಾರ ಅಥವಾ ಕಂಪನಿಯು ಕಮೀಷನರಿಗೆ ಕ್ಲೇಮು ಮಾಡಬಹುದು ಮತ್ತು ಪ್ರತಿಯೊಂದು ಅಂಥ ಕ್ಲೇಮು, ಸರ್ಕಾರ ಅಥವಾ ಕಂಪನಿಯಿಂದ ನಿರ್ವಹಿಸಲಾದ ಅಂಥ ಹೊಣೆಗೆ ಸಂಬಂಧಿಸಿದ ವಿಷಯಗಳಿಗೆ ಈ ಅಧಿನಿಯಮದ ಅಡಿಯಲ್ಲಿ ನೀಡಲಾಗುವ ಆದ್ಯತೆಗನುಸಾರವಾಗಿ ಆದ್ಯತೆ ಪಡೆಯತಕ್ಕದ್ದು.

(3) ಈ ಅಧಿನಿಯಮದಲ್ಲಿ ಉಪಬಂಧಿಸಿರುವುದನ್ನುಳಿದು, ಗೊತ್ತುಪಡಿಸಲಾದ ದಿನಾಂಕಕ್ಕೆ ಹಿಂದಿನ ಯಾವುದೇ ವ್ಯವಹಾರಕ್ಕೆ ಸಂಬಂಧಿಸಿದಂತೆ, ಗಿರಣಿಗಳ ಸಂಬಂಧದಲ್ಲಿ ನಿರ್ದಿಷ್ಟಪಡಿಸಲಾದ ದಿನಾಂಕದಂದು ಅಥವಾ ಮುಂಚೆ, ಗುತ್ತಿಗೆಗೆ ಕೊಡುವವನ ಅಥವಾ ಗುತ್ತಿಗೆದಾರನ ನಿರ್ವಹಿಸದಿರುವ ಹೊಣೆಗಳು, ಸಂಧರ್ಭಾನುಸಾರ ಗುತ್ತಿಗೆಗೆ ಕೊಡುವವನ ಅಥವಾ ಗುತ್ತಿಗೆದಾರನ ಹೊಣೆಗಳಾಗಿರತಕ್ಕದ್ದು.

**18. ಕಮೀಷನರಿಗೆ ಕ್ಲೇಮು ಮಾಡುವುದು.-** ಗೊತ್ತುಪಡಿಸಲಾದ ದಿನಾಂಕಕ್ಕೆ ಮುಂಚೆ ಗಿರಣಿಗಳ ಸಂಬಂಧದಲ್ಲಿ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಕ್ಲೇಮನ್ನು ಉಳ್ಳ ಪ್ರತಿಯೊಬ್ಬ ವ್ಯಕ್ತಿಯು, ಅಂಥ ಕ್ಲೇಮನ್ನು ನಿರ್ದಿಷ್ಟಪಡಿಸಲಾದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಕಮೀಷನರ ಮುಂದೆ ಹೂಡತಕ್ಕದ್ದು:

ಪರಂತು, ಕ್ಲೇಮುದಾರನಿಗೆ ಮೂವತ್ತು ದಿನಗಳ ಅವಧಿಯೊಳಗಾಗಿ ಕ್ಲೇಮು ಹೂಡುವುದನ್ನು ಪ್ರತಿಬಂಧಿಸುವಂಥ ಸಾಕಷ್ಟು ಕಾರಣಗಳು ಇದ್ದುವೆಂದು ಕಮೀಷನರಿಗೆ ಮನದಟ್ಟಾದರೆ, ಅವನು ಮೂವತ್ತು ದಿನಗಳ ಹೆಚ್ಚಿನ ಅವಧಿಯವರೆಗೆ ಕ್ಲೇಮನ್ನು ಪುರಸ್ಕರಿಸಬಹುದೇ ಹೊರತು, ಆ ತರುವಾಯವಲ್ಲ.

**19. ಕ್ಲೇಮುಗಳ ಆದ್ಯತೆ.-** 18ನೇ ಪ್ರಕರಣದ ಅಡಿಯಲ್ಲಿ ಹೂಡಲಾದ ಕ್ಲೇಮುಗಳು, ಈ ಮುಂದಿನ ತತ್ವಗಳಿಗನುಸಾರವಾಗಿ ಆದ್ಯತೆಗಳನ್ನು ಹೊಂದಿರತಕ್ಕವು, ಎಂದರೆ:-

(ಎ) ಪ್ರವರ್ಗ - I ಇತರ ಎಲ್ಲ ಪ್ರವರ್ಗಗಳ ಮೇಲೂ ಅಗ್ರತೆಯನ್ನು ಹೊಂದಿರತಕ್ಕದ್ದು ಮತ್ತು ಪ್ರವರ್ಗ - II, ಪ್ರವರ್ಗ - IIIರ ಮೇಲೆ ಅಗ್ರತೆಯನ್ನು ಹೊಂದಿರತಕ್ಕದ್ದು ಮತ್ತು ಇದೇ ರೀತಿಯಾಗಿ;

(ಬಿ) ಪ್ರತಿಯೊಂದು ಪ್ರವರ್ಗಗಳಲ್ಲಿ ನಿರ್ದಿಷ್ಟಪಡಿಸಲಾದ ಕ್ಲೇಮುಗಳು ಸಮದರ್ಜೆಯಾದಾಗಿದ್ದು, ಪೂರ್ಣ ಸಂದಾಯಗೊಳ್ಳುವಂತಿರತಕ್ಕದ್ದು. ಆದರೆ ಕ್ಲೇಮನ್ನು ಪೂರ್ಣವಾಗಿ ಭರಿಸಲು ಮೊಬಲಗು ಸಾಕಷ್ಟಿಲ್ಲದಿದ್ದರೆ ಅವು ಸಮ ಪ್ರಮಾಣಗಳಲ್ಲಿ ಕಡಿಮೆಗೊಂಡು ತದನುಸಾರವಾಗಿ ಸಂದಾಯಗೊಳ್ಳುವಂಥದ್ದಾಗಿರತಕ್ಕದ್ದು; ಮತ್ತು

(ಸಿ) ಕೆಳ ಪ್ರವರ್ಗದಲ್ಲಿ ನಿರ್ದಿಷ್ಟಗೊಳಿಸಲಾದ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಹೊಣೆಯನ್ನು ನಿರ್ವಹಿಸುವ ಪ್ರಶ್ನೆಯು, ನಿಕಟೋಚ್ಚ ಪ್ರವರ್ಗಗಳಲ್ಲಿ ನಿರ್ದಿಷ್ಟಪಡಿಸಲಾದ ಎಲ್ಲಾ ಹೊಣೆಗಳನ್ನು ಭರಿಸಿದ ತರುವಾಯ ಹೆಚ್ಚುವರಿಯಾಗಿ ಉಳಿದರೆ ಮಾತ್ರವೇ ಉದ್ಭವಿಸತಕ್ಕದ್ದು.

**20. ಕ್ಲೇಮುಗಳ ಪರೀಕ್ಷೆ.-** (1) 18ನೇ ಪ್ರಕರಣದ ಅಡಿಯಲ್ಲಿ ಕ್ಲೇಮುಗಳನ್ನು ಸ್ವೀಕರಿಸಿದ ಮೇಲೆ ಕಮೀಷನರು, ಅನುಸೂಚಿಯಲ್ಲಿ, ನಿರ್ದಿಷ್ಟಪಡಿಸಲಾದ ಆದ್ಯತೆಗಳ ಕ್ರಮದಲ್ಲಿ ಕೇಮುಗಳನ್ನು ವ್ಯವಸ್ಥೆಗೊಳಿಸಿ ಅಂಥ ಕ್ರಮಕ್ಕನುಸಾರವಾಗಿ ಅವುಗಳನ್ನು ಪರೀಕ್ಷಿಸತಕ್ಕದ್ದು.

(2) ಕ್ಲೇಮುಗಳನ್ನು ಪರೀಕ್ಷಿಸಿದ ಮೇಲೆ, ಯಾವುದೇ ಕೆಳ ಪ್ರವರ್ಗದಲ್ಲಿ ನಿರ್ದಿಷ್ಟಪಡಿಸಲಾದ ಹೊಣೆಗಳನ್ನು ಭರಿಸಲು ಈ ಅಧಿನಿಯಮದ ಅಡಿಯಲ್ಲಿ ತನಗೆ ಸಂದಾಯ ಮಾಡಿರುವ ಮೊಬಲಗು ಸಾಕಷ್ಟಿಲ್ಲವೆಂದು ಕಮೀಷನರು ಅಭಿಪ್ರಾಯಪಟ್ಟರೆ, ಅವನಿಗೆ, ಅಂಥ ಪ್ರವರ್ಗದ ಸಂಬಂಧದಲ್ಲಿನ ಕ್ಲೇಮುಗಳನ್ನು ಪರೀಕ್ಷಿಸುವ ಅಗತ್ಯವಿರತಕ್ಕದ್ದಲ್ಲ.

**21. ಕ್ಲೇಮುಗಳ ಅಂಗೀಕಾರ ಅಥವಾ ತಿರಸ್ಕಾರ.-** (1) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಆದ್ಯತೆಗಳ ಸಂಬಂಧದಲ್ಲಿ ಕ್ಲೇಮುಗಳನ್ನು ಪರೀಕ್ಷಿಸಿದ ತರುವಾಯ, ಕಮೀಷನರು ನಿಗದಿಪಡಿಸಿದ ದಿನಾಂಕದಂದು ಅಥವಾ ಅದಕ್ಕೆ ಮೊದಲು ಪ್ರತಿಯೊಬ್ಬ ಕ್ಲೇಮುದಾರನು ತನ್ನ ಕ್ಲೇಮಿನ ಬಗ್ಗೆ ರುಜುವಾತನ್ನು ದಾಖಲು ಮಾಡತಕ್ಕದ್ದು.

(2) ಹಾಗೆ ನಿಗದಿತವಾದ ದಿನಾಂಕಕ್ಕೆ ಮುಂಚೆ, ದೇಶದಲ್ಲಿ ವ್ಯಾಪಕ ಪ್ರಸಾರ ವಿರುವ ಇಂಗ್ಲೀಷ್ ಭಾಷೆಯಲ್ಲಿನ ದಿನ ಪತ್ರಿಕೆಯ ಒಂದು ಸಂಚಿಕೆಯಲ್ಲಿ ಮತ್ತು ರಾಜ್ಯದಲ್ಲಿ ವ್ಯಾಪಕ ಪ್ರಸಾರವಿರುವ ಕನ್ನಡ ಭಾಷೆಯಲ್ಲಿನ ದಿನ ಪತ್ರಿಕೆಯ ಒಂದು ಸಂಚಿಕೆಯಲ್ಲಿ ಜಾಹೀರಾತು ನೀಡುವ ಮೂಲಕ ಹದಿನಾಲ್ಕು ದಿನಗಳಿಗೆ ಕಡಿಮೆಯಲ್ಲದ ಅವಧಿಗೆ ಒಂದು ನೋಟೀಸನ್ನು ನೀಡತಕ್ಕದ್ದು ಮತ್ತು ಅಂಥ ಪ್ರತಿಯೊಂದು ನೋಟೀಸು, ಜಾಹೀರಾತಿನಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗಾಗಿ ಕಮೀಷನರ ಮುಂದೆ ತನ್ನ ಕ್ಲೇಮಿನ ರುಜುವಾತನ್ನು ದಾಖಲು ಮಾಡುವುದಕ್ಕಾಗಿ ಕ್ಲೇಮುದಾರರನ್ನು ಕರೆಯುವಂಥದ್ದಾಗಿರತಕ್ಕದ್ದು.

(3) ಕಮೀಷನರು ನಿರ್ದಿಷ್ಟಪಡಿಸಿದ ಕಾಲದೊಳಗಾಗಿ ತನ್ನ ಕ್ಲೇಮಿನ ರುಜುವಾತನ್ನು ದಾಖಲು ಮಾಡಲು ತಪ್ಪುವ ಪ್ರತಿಯೊಬ್ಬ ಕ್ಲೇಮುದಾರನನ್ನು, ಕಮೀಷನರು ಮಾಡುವ ಬಟವಾಡೆಯಿಂದ ಹೊರತುಪಡಿಸತಕ್ಕದ್ದು.

(4) ಕಮೀಷನರು ತನ್ನ ಅಭಿಪ್ರಾಯದಲ್ಲಿ ಅವಶ್ಯಕವಾಗಬಹುದಾದ ಅಂಥ ತನಿಖೆಯ ತರುವಾಯ, ಮತ್ತು ಕ್ಲೇಮುದಾರನಿಗೆ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶ ನೀಡಿದ ತರುವಾಯ, ಅಂಥ ಕ್ಲೇಮುಗಳ ಸ್ವರೂಪ ಮತ್ತು ವ್ಯಾಪ್ತಿಯನ್ನು ನಿರ್ಧರಿಸತಕ್ಕದ್ದು ಮತ್ತು ಲಿಖಿತ ಆದೇಶದ ಮೂಲಕ ಕ್ಲೇಮನ್ನು ಪೂರ್ಣವಾಗಿ ಅಥವಾ ಭಾಗಶಃ ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದು. ಕಮೀಷನರು, ಮೊಬಲಗಿಗೆ ಹಕ್ಕುಳ್ಳವರಾಗಿರುವ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಸಂಬಂಧಿಸಿದ ಯಾವುದೇ ವಿವಾದವನ್ನು ಹಾಗೂ ಯಾವೊಬ್ಬ ಮೃತ ಕ್ಲೇಮುದಾರನ ಕಾನೂನು ಸಮ್ಮತ ಪ್ರತಿನಿಧಿಯು ಯಾರು ಎಂಬ ವಿವಾದವನ್ನು ಸಹ ತೀರ್ಮಾನಿಸತಕ್ಕದ್ದು.

(5) ಕಮೀಷನರು, ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಉದ್ಭವಿಸುವ ಎಲ್ಲ ವಿಷಯಗಳ ಬಗ್ಗೆ ತನ್ನದೇ ಆದ ಪ್ರಕ್ರಿಯೆಯನ್ನು ಕ್ರಮಗೊಳಿಸಲು ಅಧಿಕಾರ ಹೊಂದಿರತಕ್ಕದ್ದು ಮತ್ತು ಈ ಅಧಿನಿಯಮದ ಅಡಿಯಲ್ಲಿ

ಮಾಡುವ ತನಿಖೆಯ ಉದ್ದೇಶಕ್ಕಾಗಿ, ಈ ಮುಂದಿನ ವಿಷಯಗಳ ಸಂಬಂಧದಲ್ಲಿನ ದಾವೆಯ ವಿಚಾರಣೆ ಮಾಡುವಾಗ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಅಡಿಯಲ್ಲಿ ಸಿವಿಲ್ ನ್ಯಾಯಾಲದಲ್ಲಿ ನಿಹಿತವಾದ ಅಂಥವೇ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಯಾವೊಬ್ಬ ಸಾಕ್ಷಿದಾರನನ್ನು ಕರೆಸುವುದು ಮತ್ತು ಅವನ ಹಾಜರಾತಿಯನ್ನು ಅಗತ್ಯಪಡಿಸುವುದು ಹಾಗೂ ಅವನನ್ನು ಪ್ರಮಾಣದ ಮೇಲೆ ಪರೀಕ್ಷಿಸುವುದು;

(ಬಿ) ಯಾವುದೇ ದಸ್ತಾವೇಜನ್ನು ಕಂಡುಹಿಡಿಯುವುದು ಮತ್ತು ಹಾಜರು ಪಡಿಸುವುದು;

(ಸಿ) ಶಪಥಪತ್ರಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಸಾಕ್ಷಿದಾರನನ್ನು ಪರೀಕ್ಷಿಸುವುದಕ್ಕಾಗಿ ಯಾವುದೇ ಆಯೋಗವನ್ನು ಹೊರಡಿಸುವುದು.

(6) ಕಮೀಷನರ ಮುಂದಿರುವ ಯಾವುದೇ ತನಿಖೆಯನ್ನು ಭಾರತ ದಂಡ ಸಂಹಿತೆಯ 193 ಮತ್ತು 228ನೇ ಪ್ರಕರಣಗಳ ಅರ್ಥವ್ಯಾಪ್ತಿಯಲ್ಲಿ ಒಂದು ನ್ಯಾಯಿಕ ವ್ಯವಹರಣೆಯೆಂದು ಭಾವಿಸತಕ್ಕದ್ದು ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973ರ 195ನೇ ಪ್ರಕರಣ ಹಾಗೂ ೩೬ನೇ ಅಧ್ಯಾಯದ ಉದ್ದೇಶಗಳಿಗಾಗಿ, ಕಮೀಷನರನ್ನು ಒಂದು ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

(7) ಕಮೀಷನರ ತೀರ್ಮಾನದಿಂದ ಅತೃಪ್ತನಾದ ಕ್ಲೇಮುದಾರನು, ಗಿರಣಿಗಳು ಇರುವ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗಿರುವ ಜಿಲ್ಲಾ ನ್ಯಾಯಾಲಯಕ್ಕೆ ತೀರ್ಮಾನದ ವಿರುದ್ಧ ಒಂದು ಅಪೀಲನ್ನು ಸಲ್ಲಿಸಬಹುದು.

**22. ಕಮೀಷನರು ಕ್ಲೇಮುದಾರರಿಗೆ ಮೊಬಲಗನ್ನು ಬಟವಾಡೆ ಮಾಡುವುದು.-** ಈ ಅಧಿನಿಯಮದ ಅಡಿಯಲ್ಲಿ ಒಂದು ಕ್ಲೇಮನ್ನು ಅಂಗೀಕರಿಸಿದ ತರುವಾಯ, ಅಂಥ ಕ್ಲೇಮುಗಳ ಸಂಬಂಧದಲ್ಲಿ ಬಾಕಿಯಿರುವ ಮೊಬಲಗನ್ನು ಕಮಿಷನರು, ಅಂಥ ಮೊಬಲಗು ಬಾಕಿಯಿರುವ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಸಂದಾಯ ಮಾಡತಕ್ಕದ್ದು ಮತ್ತು ಅಂಥ ಸಂದಾಯವಾದ ಮೇಲೆ ಅಂಥ ಕ್ಲೇಮುಗಳ ಸಂಬಂಧದಲ್ಲಿರುವ ಗಿರಣಿಗಳ ಹೊಣೆಯು ಕೊನೆಗೊಳ್ಳತಕ್ಕದ್ದು.

[1][22ಎ. **ಗುತ್ತಿಗೆದಾರನ ಮೊಬಲಗಿನ ಹಂಚಿಕೆ, ಇತ್ಯಾದಿ.-** (1) ಗಿರಣಿಗಳಿಗೆ ಸಂಬಂಧಪಟ್ಟಂತೆ ತನಗೆ ಸಂದಾಯ ಮಾಡಿದ ಮೊಬಲಗಿನಲ್ಲಿ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಹೊಣೆಗಾರಿಕೆಗಳನ್ನು ಭರಿಸಿದ ತರುವಾಯ ಬಾಕಿ ಉಳಿದಿದ್ದಲ್ಲಿ, ಅಂಥ ಬಾಕಿ ಮೊಬಲಗನ್ನು ಕಮೀಷನರನು ಗುತ್ತಿಗೆದಾರ, ಗುತ್ತಿಗೆ ಕೊಡುವವನು ಮತ್ತು ಭೂಮಿಯ ಒಡೆಯನಿಗೆ ವಿತರಣೆ ಮಾಡತಕ್ಕದ್ದು.

(2) ಗುತ್ತಿಗೆದಾರನಿಗೆ, ಗುತ್ತಿಗೆ ಕೊಡುವವನಿಗೆ ಅಥವಾ ಭೂಮಿಯ ಒಡೆಯನಿಗೆ, ಅವನಿಗೆ ಗಿರಣಿಗಳಲ್ಲಿರುವ ಹಿತಾಸಕ್ತಿಗೆ ಅನುಸಾರವಾಗಿ ಯಾವುದೇ ಹಣ ಸಂದಾಯ ಮಾಡುವುದಕ್ಕೆ ಮೊದಲು, ಕಮೀಷನರನು, ಅಂಥ ಮೊಬಲಗಿನ ಪೂರ್ಣ ಅಥವಾ ಯಾವುದೇ ಭಾಗವನ್ನು ಪಡೆಯಲು ಅಂಥ ಗುತ್ತಿಗೆದಾರ, ಗುತ್ತಿಗೆ ಕೊಡುವವನು ಅಥವಾ ಭೂಮಿಯ ಒಡೆಯನು ಹಕ್ಕು ಹೊಂದಿರುವ ಬಗ್ಗೆ ಸ್ವತಃ ಮನದಟ್ಟು ಮಾಡಿಕೊಳ್ಳಬೇಕು ಮತ್ತು ಅವರುಗಳ ನಡುವೆ ಮೊಬಲಗಿನ ಹಂಚುವಿಕೆಯೂ ಸೇರಿದಂತೆ 9 ಮತ್ತು 10ನೇ ಪ್ರಕರಣಗಳಲ್ಲಿ ಉಲ್ಲೇಖಿಸಲಾದ ಪೂರ್ಣ ಮೊಬಲಗು ಅಥವಾ ಅದರ ಭಾಗವನ್ನು ಪಡೆಯುವ ಬಗ್ಗೆ ಅಂಥ ಗುತ್ತಿಗೆ ಕೊಡುವವನು, ಗುತ್ತಿಗೆದಾರ ಅಥವಾ ಭೂಮಿಯ ಒಡೆಯನ ಹಕ್ಕಿನ ಬಗ್ಗೆ ಸಂಶಯ ಇದ್ದಲ್ಲಿ

ಅಥವಾ ವಿವಾದ ಇದ್ದಲ್ಲಿ, ಕಮೀಷನರನು ಆಗ ವಿಷಯವನ್ನು ನ್ಯಾಯಾಲಯಕ್ಕೆ ಉಲ್ಲೇಖಿಸತಕ್ಕದ್ದು ಮತ್ತು ನ್ಯಾಯಾಲಯದ ತೀರ್ಮಾನದಂತೆ ಮೊಬಲಗನ್ನು ಹಂಚಿಕೆ ಮಾಡತಕ್ಕದ್ದು.

(3) ನ್ಯಾಯಾಲಯವು, ಗೊತ್ತುಪಡಿಸಿದ ದಿನದಂದು ಗಿರಣಿಯ ಭಾಗವಾಗಿರುವ ಸ್ವತ್ತಿನ ಮೌಲ್ಯದ ಬಗ್ಗೆ ಯುಕ್ತ ಗಮನ ನೀಡಿ ಗಿರಣಿಗೆ ಸಂಬಂಧಪಟ್ಟಂತೆ ಗುತ್ತಿಗೆ ಕೊಡುವವನು, ಗುತ್ತಿಗೆದಾರ ಅಥವಾ ಭೂಮಿಯ ಒಡೆಯನ ನಡುವೆ ಮೊಬಲಗಿನ ಹಂಚಿಕೆಯನ್ನು ತೀರ್ಮಾನಿಸತಕ್ಕದ್ದು.

(4) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಗಿರಣಿಗಳಿಗೆ ಸಂಬಂಧಿಸಿದಂತೆ, ಗುತ್ತಿಗೆ ಕೊಡುವವನು, ಗುತ್ತಿಗೆದಾರ ಅಥವಾ ಭೂಮಿಯ ಒಡೆಯನ ಹಕ್ಕು ಸ್ವಾಮ್ಯ ಮತ್ತು ಹಿತಾಸಕ್ತಿಯನ್ನು ರುಜುವಾತುಪಡಿಸಲು ಸಾಕ್ಷ್ಯವು ನ್ಯಾಯಾಲಯದಲ್ಲಿ ಅಂಗೀಕಾರಾರ್ಹವಾಗಿರತಕ್ಕದ್ದು.

**ವಿವರಣೆ:-** ಈ ಪ್ರಕರಣದಲ್ಲಿ, ಗಿರಣಿಗೆ ಸಂಬಂಧಿಸಿದಂತೆ 'ನ್ಯಾಯಾಲಯ' ಎಂದರೆ, ಯಾವುದರ ಅಧಿಕಾರ ವ್ಯಾಪ್ತಿಯ ಸ್ಥಳೀಯ ಮಿತಿಗಳೊಳಗೆ ಗಿರಣಿಯು ಸ್ಥಾಪನೆಗೊಂಡಿದೆಯೋ ಆ ಅಸಲು ಅಧಿಕಾರ ವ್ಯಾಪ್ತಿಯ ಪ್ರಧಾನ ನ್ಯಾಯಾಲಯ.][1]

1. 2005ರ ಅಧಿನಿಯಮ ಸಂಖ್ಯೆ 20ರ ಮೂಲಕ ದಿನಾಂಕ: 30.06.1986 ರಿಂದ ಸೇರಿಸಲಾಗಿದೆ.

**23. ಬಟವಾಡೆ ಮಾಡದ ಅಥವಾ ಕ್ಲೇಮುಮಾಡದ ಮೊಬಲಗನ್ನು ಸಾಮಾನ್ಯ ರಾಜಸ್ವ ಲೆಕ್ಕಕ್ಕೆ ಜಮೆ ಮಾಡುವುದು.-** ಆಯೋಗದ ಕಛೇರಿಯು ಅಂತಿಮವಾಗಿ ಪರಿಸಮಾಪನಗೊಂಡ ದಿನಾಂಕದ ನಿಕಟಪೂರ್ವದ ದಿನಾಂಕದಂದು ಬಟವಾಡೆಯಾಗದ ಅಥವಾ ಕ್ಲೇಮು ಮಾಡದೆ ಉಳಿದಿರುವ, ಕಮೀಷನರು ಸಂದಾಯ ಮಾಡಬೇಕಾದ ಯಾವುದೇ ಮೊಬಲಗನ್ನು ಸರ್ಕಾರದ ಸಾಮಾನ್ಯ ರಾಜಸ್ವ ಲೆಕ್ಕಕ್ಕೆ ಕಮೀಷನರು ವರ್ಗಾವಣೆ ಮಾಡತಕ್ಕದ್ದು. ಆದರೆ ಹಾಗೆ ವರ್ಗಾವಣೆ ಮಾಡಲಾದ ಯಾವುದೇ ಮೊಬಲಗಿನ ಸಂಬಂಧದ ಒಂದು ಕ್ಲೇಮನ್ನು, ಅಂಥ ಸಂದಾಯಕ್ಕೆ ಹಕ್ಕುಳ್ಳವನಾಗಿರುವ ವ್ಯಕ್ತಿಯು ಸರ್ಕಾರಕ್ಕೆ ಸಲ್ಲಿಸಬಹುದು ಮತ್ತು ಅಂಥ ವರ್ಗಾವಣೆಯನ್ನು ಮಾಡದಿದ್ದರೆ ಹೇಗೋ ಹಾಗೆ ವ್ಯವಹರಿಸತಕ್ಕದ್ದು. ಕ್ಲೇಮಿನ ಬಗ್ಗೆ ಮಾಡಿದ ಸಂದಾಯಕ್ಕಾಗಿ ಯಾವುದಾದರೂ ಆದೇಶ ಇದ್ದರೆ, ಅದನ್ನು, ಕಂದಾಯದ ಮರುಪಾವತಿಯ ಸಲುವಾಗಿರುವ ಒಂದು ಆದೇಶವೆಂದು ಪರಿಗಣಿಸತಕ್ಕದ್ದು.

## ಅಧ್ಯಾಯ VI

### ಗಿರಣಿಗಳ ನೌಕರರಿಗೆ ಸಂಬಂಧಿಸುವ ಉಪಬಂಧಗಳು

**24. ಗಿರಣಿಗಳ ಅಧಿಕಾರಿಗಳ ಅಥವಾ ಇತರ ನೌಕರರ ಸೇವಾ ವರ್ಗಾವಣೆ.-** (1) 8ನೇ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ದಿನಾಂಕದ ನಿಕಟಪೂರ್ವದಲ್ಲಿ ಗಿರಣಿಗಳಲ್ಲಿ ನೇಮಕಗೊಂಡ ಪ್ರತಿಯೊಬ್ಬ ವ್ಯಕ್ತಿಯು, ಕಂಪನಿಯ ಒಬ್ಬ ನೌಕರನಾಗತಕ್ಕದ್ದು ಮತ್ತು ಅಂಥ ನಿಹಿತಗೊಳಿಸುವಿಕೆಯು ಇಲ್ಲದಿದ್ದರೆ ಅವನಿಗೆ ಅನುಮತಿಸಲಾಗುತ್ತಿದ್ದ ನಿವೃತ್ತಿ ವೇತನ, ಉಪದಾನ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದಂತೆ ಅಂಥವೇ ಹಕ್ಕುಗಳು ಮತ್ತು ವಿಶೇಷಾಧಿಕಾರಗಳೊಂದಿಗೆ ಕಂಪನಿಯ ಅಡಿಯಲ್ಲಿನ ಹುದ್ದೆಯನ್ನು ಅಥವಾ ಸೇವೆಯನ್ನು ಧಾರಣ ಮಾಡತಕ್ಕದ್ದು ಮತ್ತು ಕಂಪನಿಯ ಅಡಿಯಲ್ಲಿನ ಅವನ ನೇಮಕವು ಯಥೋಚಿತವಾಗಿ ಸಮಾಪ್ತಿಯಾದ ಹೊರತು ಮತ್ತು ಅಲ್ಲಿಯವರೆಗೆ ಅಥವಾ ಕಂಪನಿಯಿಂದ ಅವನ ಸಂಭಾವನೆ ಮತ್ತು ಇತರ ಸೇವಾ ಷರತ್ತುಗಳು ಯಥೋಚಿತವಾಗಿ ಬದಲಾಗುವವರೆಗೆ ಮುಂದುವರೆಯತಕ್ಕದ್ದು.

(2) ಕೈಗಾರಿಕಾ ವಿವಾದಗಳ ಅಧಿನಿಯಮ, 1947ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಗಿರಣಿಗಳಲ್ಲಿ ನೇಮಕಗೊಂಡ ಯಾವೊಬ್ಬ ಅಧಿಕಾರಿ ಅಥವಾ ಇತರ ವ್ಯಕ್ತಿಯ ಸೇವೆಗಳ ವರ್ಗಾವಣೆಯು ಕಂಪನಿಗೆ ಆದಲ್ಲಿ, ಅಂಥ ವರ್ಗಾವಣೆಯು, ಅಂಥ ಅಧಿಕಾರಿ ಅಥವಾ ಇತರ ನೌಕರರನ್ನು ಈ ಅಧಿನಿಯಮದ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಅಡಿಯಲ್ಲಿ ಯಾವುದೇ ನಷ್ಟ ಪರಿಹಾರಕ್ಕೆ ಹಕ್ಕುಳ್ಳವನನ್ನಾಗಿಸತಕ್ಕದ್ದಲ್ಲ ಮತ್ತು ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರವು ಅಂಥ ಯಾವುದೇ ಕ್ಲೇಮನ್ನು ಪುರಸ್ಕರಿಸತಕ್ಕದ್ದಲ್ಲ.

**25. ಭವಿಷ್ಯ ನಿಧಿ, ಕಲ್ಯಾಣ ನಿಧಿ ಮೊದಲಾದುವುಗಳ ವರ್ಗಾವಣೆ.-** (1) ಗಿರಣಿಗಳಲ್ಲಿ ನೇಮಕಗೊಂಡ ವ್ಯಕ್ತಿಗಳ ಸೌಲಭ್ಯಕ್ಕಾಗಿ, ಭವಿಷ್ಯ ನಿಧಿ, ಸೇವಾ ನಿವೃತ್ತಿ ನಿಧಿ, ಕಲ್ಯಾಣ ನಿಧಿ ಅಥವಾ ಇತರ ಯಾವುದೇ ನಿಧಿಯನ್ನು ಗಿರಣಿಯು ಸ್ಥಾಪಿಸಿರುವಲ್ಲಿ, ಈ ಅಧಿನಿಯಮದಿಂದ ಅಥವಾ ಅದರ ಅಡಿಯಲ್ಲಿ ಯಾರ ಸೇವೆಗಳು ಕಂಪನಿಗೆ ವರ್ಗಾವಣೆಯಾಗಿದೆಯೋ ಆ ಅಧಿಕಾರಿಗಳಿಗೆ ಅಥವಾ ಇತರ ನೌಕರರಿಗೆ ಸಂಬಂಧಿಸಬಹುದಾದ ಹಣವನ್ನು, 8ನೇ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ನಿಹಿತಗೊಳಿಸುವಿಕೆಯ ದಿನಾಂಕದಂದು ಇದ್ದ ಹಣದ ಪೈಕಿಯಿಂದ ಅಂಥ ಭವಿಷ್ಯ ನಿಧಿ, ಸೇವಾ ನಿವೃತ್ತಿ ನಿಧಿ, ಕಲ್ಯಾಣ ನಿಧಿ ಅಥವಾ ಇತರ ನಿಧಿಯ ಲೆಕ್ಕಕ್ಕೆ ಜಮೆ ಮಾಡಿ ಕಂಪನಿಗೆ ವರ್ಗಾಯಿಸತಕ್ಕದ್ದು ಮತ್ತು ಅಲ್ಲಿಯೇ ನಿಹಿತಗೊಳಿಸತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಕಂಪನಿಗೆ ವರ್ಗಾವಣೆಯಾಗಿರುವ ಹಣದ ಬಗ್ಗೆ, ಕಂಪನಿಯು ನಿಯಮಿಸಬಹುದಾದ ಅಂಥ ರೀತಿಯಲ್ಲಿ ವ್ಯವಹರಿಸತದ್ದು.

## ಅಧ್ಯಾಯ VII

### ಸಂಕೀರ್ಣ

**26. ಅಧಿನಿಯಮವು ಅಧ್ಯಾರೋಹಿ ಪ್ರಭಾವವನ್ನು ಹೊಂದಿರುವುದು.-** ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಈ ಅಧಿನಿಯಮವಲ್ಲದ ಯಾವುದೇ ಕಾನೂನಿನ ಕಾರಣದಿಂದಾಗಿ ಪರಿಣಾಮವನ್ನು ಹೊಂದಿರುವ ಯಾವುದೇ ಲಿಖಿತದಲ್ಲಿ ಅಥವಾ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಯಾವುದೇ ಡಿಕ್ರಿಯಲ್ಲಿ ಅಥವಾ ಆದೇಶದಲ್ಲಿ, ಅವುಗಳಿಗೆ ಅಸಂಗತವಾದ ಯಾವುದೇ ವಿಷಯ ಒಳಗೊಂಡಿದ್ದರೂ ಪರಿಣಾಮಕಾರಿಯಾಗತಕ್ಕದ್ದು.

**27. ಕಂಪನಿಯಿಂದ ಅನುಸಮರ್ಥನೆಯಾದ ಹೊರತು ಕರಾರು ಪರಿಣಾಮಕಾರಿಯಾಗುವುದು ನಿಂತುಹೋಗತಕ್ಕದ್ದು.-** ಯಾವುದೇ ಸೇವೆ, ಮಾರಾಟ ಅಥವಾ ಸರಬರಾಜಿಗಾಗಿ, 4ನೇ ಪ್ರಕರಣದ ಅಡಿಯಲ್ಲಿ ಸರ್ಕಾರದಲ್ಲಿ ನಿಹಿತವಾಗಿರುವ, ಗಿರಣಿಗೆ ಸಂಬಂಧಿಸಿದಂತೆ ಗುತ್ತಿಗೆಗೆ ಕೊಡುವವನು ಅಥವಾ ಗುತ್ತಿಗೆದಾರನಿಂದ ಅಥವಾ ಪ್ರಸ್ತುತ ವ್ಯವಸ್ಥಾಪನೆಯಿಂದ ಮಾಡಿಕೊಳ್ಳಲಾದ ಮತ್ತು ಗೊತ್ತುಪಡಿಸಲಾದ ದಿನಾಂಕದ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಪ್ರತಿಯೊಂದು ಕರಾರು, ಗೊತ್ತುಪಡಿಸಲಾದ ದಿನಾಂಕದಿಂದ ಮೂವತ್ತು ದಿನಗಳು ಮುಕ್ತಾಯವಾಗುವಂದು ಮತ್ತು ಅಂದಿನಿಂದ, ಆ ಅವಧಿಯು ಮುಕ್ತಾಯಗೊಳ್ಳುವ ಮೊದಲು, ಕಂಪನಿಯು ಲಿಖಿತ ಮೂಲಕ ಅಂಥ ಕರಾರನ್ನು ಅನುಸಮರ್ಥನೆಗೊಳಿಸಿದ ಹೊರತು, ಪರಿಣಾಮಕಾರಿಯಾಗುವುದು ನಿಂತು ಹೋಗತಕ್ಕದ್ದು ಮತ್ತು ಅಂಥ ಕರಾರನ್ನು ಅನುಸಮರ್ಥಿಸುವಲ್ಲಿ, ಕಂಪನಿಯು ಅದರಲ್ಲಿ ತಾನು ಉಚಿತವೆಂದು ಭಾವಿಸಬಹುದಾದಂಥ ಬದಲಾವಣೆ ಅಥವಾ ಮಾರ್ಪಾಟನ್ನು ಮಾಡಬಹುದು:

ಪರಂತು,-

(ಎ) ಅಂಥ ಕರಾರು ಅನುಚಿತವಾಗಿ ಕರ್ತವ್ಯ ಭಾರವುಳ್ಳದ್ದಾಗಿದೆಯೆಂದು ಅಥವಾ ದುರ್ಭಾವನೆಯಿಂದ ಅದನ್ನು ಮಾಡಿಕೊಳ್ಳಲಾಯಿತೆಂದು ಅಥವಾ ಅದು ಕಂಪನಿಯ ಹಿತಾಸಕ್ತಿಗೆ ಬಾಧಕವಾಗುವುದೆಂದು ಮನದಟ್ಟಾದ ಹೊರತು;

(ಬಿ) ಕರಾರು ಮಾಡಿಕೊಳ್ಳುವ ಪಕ್ಷಗಳಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ಹೊರತು ಮತ್ತು ಕರಾರನ್ನು ಅನುಸಮರ್ತಿಸಲು ಅಥವಾ ಅದರಲ್ಲಿ ಯಾವುದೇ ಬದಲಾವಣೆ ಅಥವಾ ಮಾರ್ಪಾಟನ್ನು ಮಾಡಲು ತಿರಸ್ಕರಿಸಿದುದಕ್ಕೆ ಲಿಖಿತ ಮೂಲಕ ಕಾರಣಗಳನ್ನು ಅಭಿಲೇಖಿಸಿದ ಹೊರತು,

ಕಂಪನಿಯು, ಕರಾರನ್ನು ಅನುಸಮರ್ಥನೆ ಮಾಡುವುದನ್ನು ಲೋಪಿಸತಕ್ಕದ್ದಲ್ಲ ಅಥವಾ ಕರಾರಿನಲ್ಲಿ ಯಾವುದೇ ಬದಲಾವಣೆ ಅಥವಾ ಮಾರ್ಪಾಟನ್ನು ಮಾಡತಕ್ಕದ್ದಲ್ಲ.

**28. ಸದ್ಭಾವನೆಯಿಂದ ಕೈಗೊಳ್ಳಲಾದ ಕ್ರಮದ ರಕ್ಷಣೆ.-** (1) ಸರ್ಕಾರ ಅಥವಾ ಯಾವೊಬ್ಬ ಅಧಿಕಾರಿ ಅಥವಾ ಸರ್ಕಾರದ ಅಥವಾ ಕಂಪನಿಯ ಯಾವೊಬ್ಬ ಅಧಿಕಾರಿ ಅಥವಾ ಇತರ ನೌಕರರ ಅಥವಾ ಸರ್ಕಾರದಿಂದ ಅಥವಾ ಕಂಪನಿಯಿಂದ ಪ್ರಾಧಿಕೃತನಾದ ಇತರ ವ್ಯಕ್ತಿಯ ವಿರುದ್ಧ ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಳ್ಳಲಾದ ಅಥವಾ ಕೈಗೊಳ್ಳಲು ಉದ್ದೇಶಿಸಲಾದ ಯಾವುದೇ ಕೃತ್ಯದ ಬಗ್ಗೆ ಯಾವುದೇ ದಾವೆ, ಅಭಿಯೋಜನೆ ಅಥವಾ ಕಾನೂನು ವ್ಯವಹರಣೆಗಳು ಇರತಕ್ಕದ್ದಲ್ಲ.

(2) ಸರ್ಕಾರ ಅಥವಾ ಸರ್ಕಾರದ ಅಥವಾ ಕಂಪನಿಯ ಯಾವೊಬ್ಬ ಅಧಿಕಾರಿ ಅಥವಾ ಇತರ ನೌಕರರ ಅಥವಾ ಸರ್ಕಾರ ಅಥವಾ ಕಂಪನಿಯಿಂದ ಪ್ರಾಧಿಕೃತನಾದ ಇತರ ವ್ಯಕ್ತಿಯ ವಿರುದ್ಧ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಲಾದ ಯಾವುದೇ ಕೃತ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ಹಾನಿಗಾಗಿ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯು ಇರತಕ್ಕದ್ದಲ್ಲ.

**29. ದಂಡಗಳು.-** ಯಾವೊಬ್ಬ ವ್ಯಕ್ತಿಯು,-

(ಎ) ಗಿರಣಿಗಳ ಒಂದು ಭಾಗವಾಗಿರುವ ಯಾವುದೇ ಸ್ವತ್ತನ್ನು ಅಕ್ರಮತೆಯಿಂದ ಹೊಂದಿದ್ದು ತನ್ನ ಸ್ವಾಧೀನತೆ, ಅಭಿರಕ್ಷೆ ಅಥವಾ ನಿಯಂತ್ರಣದಲ್ಲಿರುವ ಅಂಥ ಸ್ವತ್ತನ್ನು ಸರ್ಕಾರ ಅಥವಾ ಕಂಪನಿಗೆ ಒಪ್ಪಿಸದಿದ್ದರೆ; ಅಥವಾ

(ಬಿ) ಗಿರಣಿಗಳ ಒಂದು ಭಾಗವಾಗಿರುವ ಯಾವುದೇ ಸ್ವತ್ತಿನ ಸ್ವಾಧೀನತೆಯನ್ನು ಅಕ್ರಮವಾಗಿ ಹೊಂದಿದ್ದರೆ ಅಥವಾ ಅದನ್ನು ಇಟ್ಟುಕೊಂಡರೆ; ಅಥವಾ

(ಸಿ) ತನ್ನ ಸ್ವಾಧೀನತೆ, ಅಭಿರಕ್ಷೆ ಅಥವಾ ನಿಯಂತ್ರಣದಲ್ಲಿರಬಹುದಾದ, ಗಿರಣಿಗಳಿಗೆ ಸಂಬಂಧಿಸಿದ ದಸ್ತಾವೇಜು ಅಥವಾ ವಿವರಣಾ ಪಟ್ಟಿಯನ್ನು ಉದ್ದೇಶಪೂರ್ವಕವಾಗಿ ಒಪ್ಪಿಸಿದರೆ ಅಥವಾ ಸಂದರ್ಭಾನುಸಾರ, ಸರ್ಕಾರ ಅಥವಾ ಕಂಪನಿ ಅಥವಾ ಸರ್ಕಾರ ಅಥವಾ ಕಂಪನಿಯಿಂದ ನಿರ್ದಿಷ್ಟಪಡಿಸಿದ ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ನಿಕಾಯಕ್ಕೆ ಒದಗಿಸಲು ತಪ್ಪಿದರೆ; ಅಥವಾ

(ಡಿ) ಗಿರಣಿಗಳಿಗೆ ಸಂಬಂಧಿಸಿದ, ತನ್ನ ಸ್ವಾಧೀನತೆ, ಅಭಿರಕ್ಷೆ ಅಥವಾ ನಿಯಂತ್ರಣದಲ್ಲಿರಬಹುದಾದ, ಗುತ್ತಿಗೆದಾರನಿಗೆ, ಗುತ್ತಿಗೆಗೆ ಕೊಡುವವನಿಗೆ ಅಥವಾ ಪ್ರಸ್ತುತ ವ್ಯವಸ್ಥಾಪನೆಗೆ ಸಂಬಂಧಿಸಿದ ಯಾವುದೇ ದಸ್ತಾವೇಜು ಅಥವಾ ವಿವರಣಾ ಪಟ್ಟಿಯನ್ನು, ಸಂದರ್ಭಾನುಸಾರ, ಸರ್ಕಾರ ಅಥವಾ

ಕಂಪನಿ ಅಥವಾ ಸರ್ಕಾರ ಅಥವಾ ಕಂಪನಿಯಿಂದ ನಿರ್ದಿಷ್ಟಪಡಿಸಲಾದ ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ನಿಕಾಯಕ್ಕೆ ತಲುಪಿಸಲು ತಪ್ಪಿದರೆ; ಅಥವಾ

(ಇ) ಗಿರಣಿಗಳ ಒಂದು ಭಾಗವಾಗಿರುವ ಯಾವುದೇ ಸ್ವತ್ತನ್ನು ಅಕ್ರಮವಾಗಿ ತೆಗೆದರೆ ಅಥವಾ ನಾಶಪಡಿಸಿದರೆ; ಅಥವಾ

(ಎಫ್) ತಾನು ಸುಳ್ಳೆಂದು ತಿಳಿದಿರುವ ಅಥವಾ ಸುಳ್ಳೆಂದು ಅಥವಾ ತೀರಾ ಅನಿಷ್ಕೃಷ್ಟವೆಂದು ನಂಬಲು ತನಗೆ ಯುಕ್ತ ಕಾರಣವಿರುವ ಯಾವುದೇ ಕ್ಲೇಮನ್ನು ಈ ಅಧಿನಿಯಮದ ಅಡಿಯಲ್ಲಿ ಸಲ್ಲಿಸಿದರೆ,

- ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

**30. ಕಂಪನಿಗಳಿಂದ ಆದ ಅಪರಾಧಗಳು.-** (1) ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಅಪರಾಧವು ಕಂಪನಿಯಿಂದ ಘಟಿಸಿದ್ದರೆ, ಅಪರಾಧವು ಘಟಿಸಿದ ಸಮಯದಲ್ಲಿ ಕಂಪನಿಯ ಪ್ರಭಾರದಲ್ಲಿದ್ದ ಕಂಪನಿಯ ವ್ಯವಹಾರ ನಡೆವಳಿಕೆಗೆ ಹಾಗೂ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಅಪರಾಧದ ದೋಷಿಯೆಂದು ಭಾವಿಸತಕ್ಕದ್ದು ಮತ್ತು ಅದಕ್ಕೆ ವಿರುದ್ಧವಾದ ವ್ಯವರಣೆಗಳಿಗೆ ಅವನು ಬದ್ಧನಾಗಿರತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು:

ಪರಂತು, ಈ ಉಪ-ಪ್ರಕರಣದಲ್ಲಿ ಒಳಗೊಂಡಿರುವುದಾವುದೂ ಅಂಥ ವ್ಯಕ್ತಿಯನ್ನು ಅವನು, ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ಘಟಿಸಿತೆಂದು ಅಥವಾ ಅಪರಾಧವು ಘಟಿಸುವುದನ್ನು ತಡೆಯಲು ತಾನು ಎಲ್ಲ ಯುಕ್ತ ಶ್ರದ್ಧೆಯನ್ನು ವಹಿಸಿದ್ದೆನೆಂದು ರುಜುವಾತು ಪಡಿಸಿದರೆ ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಅಪರಾಧವು ಒಂದು ಕಂಪನಿಯ ಯಾವೊಬ್ಬ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿ ಅಥವಾ ಪರೋಕ್ಷ ಸಮ್ಮತಿಯಿಂದ ಅಥವಾ ಅವನ ಕಡೆಯಿಂದಾದ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ಸಂಭವಿಸಿತೆಂದು ರುಜುವಾತಾದರೆ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಅಪರಾಧದ ದೋಷಿಯೆಂದು ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು.

***ವಿವರಣೆಗಳು.-*** ಈ ಪ್ರಕರಣದ ಉದ್ದೇಶಕ್ಕಾಗಿ,-

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಇದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಸ್ಥೆಯನ್ನು ಒಳಗೊಳ್ಳುತ್ತದೆ;

(ಬಿ) ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ ಫರ್ಮಿನ ಒಬ್ಬ ಪಾಲುದಾರ.

**31. ನಿಯಮಗಳ ರಚನಾಧಿಕಾರ.-** (1) ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಗೊಳಿಸುವುದಕ್ಕಾಗಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಪೂರ್ವೋಕ್ತ ಅಧಿಕಾರದ ಸಾಮಾನ್ಯತೆಗೆ ಪ್ರತಿಕೂಲವಾಗದಂತೆ, ಅಂಥ ನಿಯಮಗಳು ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳಿಗೆ ಉಪಬಂದವನ್ನು ಕಲ್ಪಿಸಬಹುದು, ಎಂದರೆ:-

(ಎ) 5ನೇ ಪ್ರಕರಣದ (3) ನೇ ಉಪ-ಪ್ರಕರಣದಲ್ಲಿ ಉಲ್ಲಿಖಿತವಾದ ಸೂಚನೆಯನ್ನು ಕೊಡತಕ್ಕ ಸಮಯ ಮತ್ತು ವಿಧಾನ;

(ಬಿ) ಕಂಪನಿಯ ಅಧಿಕಾರಿಗಳ ಮತ್ತು ನೌಕರರ ವೇತನ ಮತ್ತು ಭತ್ಯೆಗಳು ಮತ್ತು ಸೇವಾಷರತ್ತು;

(ಸಿ) 25ನೇ ಪ್ರಕರಣದ ಅಡಿಯಲ್ಲಿ ಯಾವುದೇ ಭವಿಷ್ಯ ನಿಧಿ ಅಥವಾ ನಿಧಿಯಲ್ಲಿನ ಹಣದ ಬಗ್ಗೆ ವ್ಯವಹರಿಸತಕ್ಕ ವಿಧಾನ;

(ಡಿ) ಅಗತ್ಯವಾಗಬಹುದಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಲಾದ ತರುವಾಯ, ರಾಜ್ಯ ವಿಧಾನಮಂಡಲವು ಅಧಿವೇಶನದಲ್ಲಿದ್ದರೆ ಸಾಧ್ಯವಾದಷ್ಟೂ ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಒಂದು ಅಧೀವೇಶನ ಅಥವಾ ಎರಡು ಅಥವಾ ಹೆಚ್ಚಿನ ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಪೂರ್ವೋಕ್ತ ಅನುಕ್ರಮ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಉಭಯ ಸದನಗಳು ಒಪ್ಪಿದರೆ ಅಥವಾ ನಿಯಮಗಳನ್ನು ರಚಿಸಬಾರದೆಂದು ಉಭಯ ಸದನಗಳು ಒಪ್ಪಿದರೆ, ತದನಂತರ, ನಿಯಮವು, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಡಿಯಲ್ಲಿ, ಹಿಂದೆ ಮಾಡಲಾದ ಯಾವುದರ ಮಾನ್ಯತೆಗೂ ಪ್ರತಿಕೂಲವಾಗಿರತಕ್ಕದ್ದಲ್ಲ.

**32. ತೊಂದರೆಗಳನ್ನು ನಿವಾರಿಸಲು ಅಧಿಕಾರ.-** ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿಸಲು ಯಾವುದೇ ತೊಂದರೆಯು ಉದ್ಭವಿಸಿದಲ್ಲಿ, ಸರ್ಕಾರವು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದ ಆದೇಶದ ಮೂಲಕ, ತೊಂದರೆಗಳನ್ನು ನಿವಾರಿಸಬಹುದು:

ಪರಂತು, ಅಂಥ ಯಾವುದೇ ಆದೇಶವನ್ನು ಗೊತ್ತುಪಡಿಸಲಾದ ದಿನಾಂಕದಿಂದ ಎರಡು ವರ್ಷಗಳ ಅವಧಿಯ ಮುಕ್ತಾಯದ ತರುವಾಯ ಮಾಡತಕ್ಕದ್ದಲ್ಲ.

**33. ನಿರಸನ ಮತ್ತು ಉಳಿಸುವಿಕೆಗಳು.-** (1) ಕರ್ನಾಟಕ ಸಹಕಾರಿ ಬಟ್ಟೆ ಗಿರಣಿಗಳು (ಆರ್ಜನೆ ಮತ್ತು ವರ್ಗಾವಣೆ) ಅಧ್ಯಾದೇಶ, 1986 (1986ರ ಕರ್ನಾಟಕ ಅಧ್ಯಾದೇಶ, 11)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸಿತವಾಗಿದ್ದರೂ, ಸದರಿ ಅಧ್ಯಾದೇಶದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕೃತ್ಯವನ್ನು, ಈ ಅಧಿನಿಯಮದ ಅಡಿಯಲ್ಲಿ ಮಾಡಲಾದುದೆಂದು ಅಥವಾ ಕೈಗೊಳ್ಳಲಾದುದೆಂದು ಭಾವಿಸತಕ್ಕದ್ದು.

**ಅನುಸೂಚಿ**

(18, 20(1) ಹಾಗೂ 21(1)ನೇ ಪ್ರಕರಣಗಳನ್ನು ನೋಡಿ)

ಗಿರಣಿಗಳ ಸಂಬಂಧದಲ್ಲಿ ಹೊಣೆಗಾರಿಕೆಗಳನ್ನು ನಿರ್ವಹಿಸುವುದಕ್ಕಾಗಿ ಆದ್ಯತೆಗಳ ಆದೇಶ.

**ಪ್ರವರ್ಗ I**

(ಎ) ಗಿರಣಿಗಳ ನೌಕರರಿಗೆ ಸಂದೇಯವಿರುವ ಮಜೂರಿಗಳು, ವೇತನಗಳು ಮತ್ತು ಇತರ ಬಾಕಿಗಳು;

(ಬಿ) ಭವಿಷ್ಯ ನಿಧಿ, ನೌಕರರ ರಾಜ್ಯ ವಿಮಾ ವಂತಿಗೆ, ಭಾರತದ ಜೀವವಿಮಾ ನಿಗಮಕ್ಕೆ ಸಂಬಂಧಿಸಿದಂತೆ ಕಂತು ಅಥವಾ ಇತರ ಯಾವುವೇ ಉದ್ದೇಶಗಳಿಗಾಗಿ ನೌಕರರ ವೇತನಗಳು ಹಾಗೂ ಮಜೂರಿಗಳಿಂದ ಮಾಡಿದ ಕಡಿತಗಳು;

(ಸಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಭವಿಷ್ಯ ನಿಧಿ, ನೌಕರರ ರಾಜ್ಯ ವಿಮಾ ನಿಧಿ, ಜೀವವಿಮಾ ನಿಗಮ ಕಂತು ಮತ್ತು ಇತರ ಯಾವುದೇ ಬಾಕಿಗಾಗಿ ಗುತ್ತಿಗೆಗೆ ಕೊಡುವವನಿಂದ ಅಥವಾ ಗುತ್ತಿಗೆದಾರರಿಂದ ಮಾಡಬೇಕಾದ ವಂತಿಗೆಗಳ (ಉಪದಾನವನ್ನು ಹೊರತುಪಡಿಸಿ) ಸಂಬಂಧದಲ್ಲಿನ ಬಾಕಿಗಳು.

### ಪ್ರವರ್ಗ II

(i) ಕೇಂದ್ರ ಸರ್ಕಾರ;

(ii) (7ನೇ ಪ್ರಕರಣದ ಅಡಿಯಲ್ಲಿ ವಸೂಲು ಮಾಡಲು ಸರ್ಕಾರಕ್ಕೆ ಹಕ್ಕಿರುವ ಮೊಬಲಗೂ ಸೇರಿದಂತೆ) ರಾಜ್ಯ ಸರ್ಕಾರ;

(iii) ಬ್ಯಾಂಕುಗಳು;

(iv) ಸರ್ಕಾರಿ ಹಣಕಾಸು ಸಂಸ್ಥೆಗಳು;

(v) ಇತರರಿಂದ,

-ಮುಂಗಡ ಕೊಡಲಾದ ಭದ್ರತೆಯುಳ್ಳ ಸಾಲದ ಅಸಲು ಮೊಬಲಗು.

### ಪ್ರವರ್ಗ III

(i) ಕೇಂದ್ರ ಸರ್ಕಾರ;

(ii) (7ನೇ ಪ್ರಕರಣದ ಅಡಿಯಲ್ಲಿ ವಸೂಲು ಮಾಡಲು ಸರ್ಕಾರಕ್ಕೆ ಹಕ್ಕಿರುವ ಮೊಬಲಗೂ ಸೇರಿದಂತೆ) ರಾಜ್ಯ ಸರ್ಕಾರ;

(iii) ಬ್ಯಾಂಕುಗಳು;

(iv) ಸರ್ಕಾರಿ ಹಣಕಾಸು ಸಂಸ್ಥೆಗಳಿಂದ,;

-ಮುಂಗಡ ಕೊಡಲಾದ ಭದ್ರತೆಯಿರದ ಸಾಲದ ಅಸಲು ಮೊಬಲಗು.

### ಪ್ರವರ್ಗ IV

(ಎ) ವ್ಯಾಪಾರ ಅಥವಾ ತಯಾರಿಕೆಗಳ ಕಾರ್ಯ ಪ್ರವರ್ತನೆಯನ್ನು ನೆರವೇರಿಸುವ ಉದ್ದೇಶಕ್ಕಾಗಿ ಗಿರಣಿಗಳ ಸಂಬಂಧದಲ್ಲಿ ಗುತ್ತಿಗೆಗೆ ಕೊಡುವವನಿಂದ ಅಥವಾ ಗುತ್ತಿಗೆದಾರನಿಂದ ಪಡೆಯಲಾದ ಯಾವುದೇ ಸಾಲ;

(ಬಿ) ಸರಕುಗಳ ಪೂರೈಕೆ ಅಥವಾ ಸೇವೆಗಳಿಗಾಗಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಅಥವಾ ಇತರ ಸರ್ಕಾರಿ ಅಥವಾ ಅರೆ ಸರ್ಕಾರಿ ಸಂಸ್ಥೆಗಳಿಗೆ ಸಂದೇಯವಿರುವ ಯಾವುವೇ ಬಾಕಿಗಳು;

(ಸಿ) II ಅಥವಾ IIIನೇ ಪ್ರವರ್ಗದ ಅಡಿಯಲ್ಲಿ ಬರುವ ಸಾಲಗಳು ಮತ್ತು ಮುಂಗಡಗಳ ಮೇಲಿನ ಬಡ್ಡಿಯ ಬಾಕಿಗಳು ಅಥವಾ ಇತರ ಬಾಕಿಗಳು.

### ಪ್ರವರ್ಗ V

(ಎ) ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳಿಗೆ, ಕಂದಾಯ, ತೆರಿಗೆಗಳು, ಉಪಕರಗಳು ದರಗಳು ಅಥವಾ ಇತರ ಬಾಕಿಗಳು;

(ಬಿ) ಇತರ ಯಾವುವೇ ಸಾಲಗಳು ಅಥವಾ ಬಾಕಿಗಳು.

## “ಅನುಬಂಧ

## (2ನೇ ಪ್ರಕರಣದ (ಜಿಜಿ) ಖಂಡ ನೋಡಿ)

## ಕರ್ನಾಟಕ ಸಹಕಾರಿ ಬಟ್ಟೆಗಿರಣಿಗಳ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1986ರ 4 ಮತ್ತು 5ನೇ ಪ್ರಕರಣಗಳಿಗನುಸಾರ ಸರ್ಕಾರದಲ್ಲಿ ನಿಹಿತವಾಗಿರುವ ಜಮೀನು ಸ್ವತ್ತು

| ಕ್ರ. ಸಂ. | ಸ್ವತ್ತಿನ ಸಂಖ್ಯೆ | | ಬಗೆ | ಪ್ರದೇಶ | | | ಚಕ್ಕುಬಂದಿ |
|---|---|---|---|---|---|---|---|
| | ಆರ್.ಎಸ್. ಸಂಖ್ಯೆ | ಸಿಟಿಎಸ್ ಸಂಖ್ಯೆ | | ಎ | ಗುಂ | ಚದರ ಗಜಗಳು | |
| 1 | 2 | 3 | 4 | 5 | 6 | 7 | 8 |
| 1. | 107/1ಬಿ ಮತ್ತು 107/2 (ಸ್ವಂತ) (ಸಾಗುವಳಿ) | 103ಎ/1 | ಖಾಲಿ ಭೂಮಿ ಮತ್ತು ದಕ್ಷಿಣ ತುದಿಯಲ್ಲಿ ಕೆಲವು ಅನಧಿಕೃತ ಕಟ್ಟಡಗಳು (ಶ್ರೀ ಜಿ.ಕೆ. ದೇಸಾಯಿ ಮತ್ತು ಆರ್.ಜಿ. ದೇಸಾಯಿ, ಅವರಿಂದ ಖರೀದಿ ಆರ್.ಎಸ್.ನಂ.107/1ಬಿ)<br>(ಕೆ.ವಿ. ದೇಸಾಯಿ,<br>ಹೆಚ್.ಆರ್. ದೇಶಪಾಂಡೆ ಮತ್ತು ಎಲ್.ಎಸ್. ದೇಶಪಾಂಡೆ ಅವರಿಂದ ಖರೀದಿ ಆರ್.ಎಸ್. ಸಂಖ್ಯೆ 107/2) | 4 | 25 | 25 | **ಪೂರ್ವಕ್ಕೆ:** ಸಿಟಿಎಸ್ ಸಂಖ್ಯೆ:211 ಎಬಿಸಿ 212 ರಿಂದ 468 ಗಿರಣಿಗೆ ಸಂಬಂಧಿಸಿದ್ದು.<br>**ಪಶ್ಚಿಮಕ್ಕೆ:** ಉನ್ನಕಲ್ ರಸ್ತೆ ಮತ್ತು ಸಿಟಿಎಸ್‌ನ ಸಂಖ್ಯೆ: 103ಎ/1ರ ಭಾಗ. ಅಂಚೆ ಮತ್ತು ತಂತಿ ಇಲಾಖೆ, ಧಾರವಾಡಕ್ಕೆ ಮಾರಾಟಮಾಡಿದೆ.<br>**ದಕ್ಷಿಣಕ್ಕೆ:** ಕಾರವಾರ ರಸ್ತೆ<br>**ಉತ್ತರಕ್ಕೆ:** ಸಿಟಿಎಸ್ ಸಂಖ್ಯೆ: 103/ಸಿ ಮತ್ತು ಸಿಟಿಎಸ್ ಸಂಖ್ಯೆ: 103ಎ/ರ ಭಾಗ (2 ಎಕರೆ 7ಗುಂಟೆಗಳು) ಹೆಚ್‌ಡಿಎಂಸಿ ಖರೀದಿಸಿದೆ ಮತ್ತು ಅದರಾಚೆಗೆ ಆರ್.ಎಸ್. ಸಂಖ್ಯೆ:214 (ಇಂದಿರಾ ಗ್ಲಾಸ್ ಹೌಸ್) |
| 2. | 108 ಮತ್ತು 108ಎ (ಸ್ವಂತದ್ದು) | 211 ಎಬಿಸಿ ಮತ್ತು 212 ರಿಂದ 468 | ಹೌಸಿಂಗ್ ಕಾಲೋನಿ ಗಿರಣಿ ಚಾಲ್. | 7 | 28 | 96 | **ಪೂರ್ವಕ್ಕೆ:** ಆರ್.ಎಸ್.ಸಂಖ್ಯೆ 108 ಮತ್ತು ಅದರಾಚೆಗೆ ಮೋರಿಯಾಗಿದ್ದು ಈಗ ಅದನ್ನು ಪೊಲೀಸ್‌ಲೈನ್ ಆಗಿ ಉಪಯೋಗಿಸುತ್ತಿದ್ದಾರೆ.<br>**ಉತ್ತರ ಮತ್ತು ಪಶ್ಚಿಮಕ್ಕೆ:** ಆರ್.ಎಸ್. ಸಂಖ್ಯೆ: 107<br>**ದಕ್ಷಿಣಕ್ಕೆ:** ಕಾರವಾರ ರಸ್ತೆ |
| 3. | 15 (ಗುತ್ತಿಗೆ ಹಿಡುವಳಿ) | 98 | ಗಿರಣಿ ಸಂಖ್ಯೆ: II ರ ಕಟ್ಟಡ ಹಳೆಯ ನೂಲಿನ ಘಟಕ, ಡಬ್ಲಿಂಗ್, ಆರ್‌ಪಿಡಬ್ಲ್ಯು, ವೈಂಡಿಂಗ್, ಸೈಜಿಂಗ್, ವೀವಿಂಗ್, ಫೋಲ್ಡಿಂಗ್, ಪ್ರಿಂಟಿಂಗ್, ಬಾಯ್ಲರ್, ಮೆಷನ್ ಷಾಪ್, ರೀಲಿಂಗ್, ಕ್ಯಾಂಟೀನ್, ಸೆಕ್ಯೂರಿಟಿ, ರೀಟೇಲ್‌ಷಾಪ್, ಇತ್ಯಾದಿ, (ಭೂಮಿಯ ಒಡೆಯ ಶ್ರೀ ಬಲ್ಲಪ್ಪ, ತಮ್ಮಣ್ಣ ನಾಯಕ್, ಚಿಟಗುಪ್ಪಿ) | 8 | 04 | 076 | **ಪೂರ್ವಕ್ಕೆ:** ಉನ್‌ಕಲ್ ರಸ್ತೆ ಮತ್ತು ಕಾರವಾರ ರಸ್ತೆ.<br>**ಪಶ್ಚಿಮಕ್ಕೆ:** ಪರಿಷ್ಕೃತ ಸರ್ವೆ ಸಂಖ್ಯೆ: 17-16 ಮತ್ತು 19ರ ಭಾಗ ಸಿಟಿಎಸ್‌ನ ಸಂಖ್ಯೆ: 99<br>**ದಕ್ಷಿಣಕ್ಕೆ:** ನಾಲೆ ಮತ್ತು ಕಾರವಾರ ರಸ್ತೆ.<br>**ಉತ್ತರಕ್ಕೆ:** ಸರ್ವೆ ಸಂಖ್ಯೆ: 19 (ಸಿಟಿಎಸ್ ಸಂಖ್ಯೆ: 99) |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| 4. | 16, 17 ಮತ್ತು 19 (ಭಾಗ-ಬಿ) (ಗುತ್ತಿಗೆ ಹಿಡುವಳಿ) (ಕೃಷಿ) | 99 | **ಗಿರಣಿ ಸಂಖ್ಯೆ: II** ಜಿನ್ನಿಂಗ್ ಮತ್ತು ಪ್ರೆಸಿಂಗ್ ಕಟ್ಟಡ, ಗೋದಾಮುಗಳು ಮತ್ತು ಖಾಲಿ ಭೂಮಿ (ಹಳೆಯ ಜಾನುವಾರು ಮಾರುಕಟ್ಟೆ) ಭೂಮಿಯ ಒಡೆಯ. ವಿಠಲ್‌ರಾವ್ ಅಣ್ಣಾಜಿ, ದೇಶಪಾಂಡೆ. ರಾಮಚಂದ್ರಂ ಅಣ್ಣಾಜಿ, ದೇಶಪಾಂಡೆ. | 14 | 28 | 000 | **ಪೂರ್ವಕ್ಕೆ:** ಸರ್ವೆಸಂಖ್ಯೆ: 15 (ಸಿಟಿಎಸ್ ಸಂಖ್ಯೆ 98) ಮತ್ತು ಉನ್ನಕಲ್ ರಸ್ತೆ. **ಪಶ್ಚಿಮಕ್ಕೆ:** ಪರಿಷ್ಕೃತ ಸರ್ವೆ ಸಂಖ್ಯೆ: 18 ಮತ್ತು 19ರ ಭಾಗ (ಸಿಟಿಎಸ್ ಸಂಖ್ಯೆ: 100 ಮತ್ತು 102) **ಉತ್ತರಕ್ಕೆ:** ಆರ್.ಎಸ್. ಸಂಖ್ಯೆ: 25 (ಸಿಟಿಎಸ್ ಸಂಖ್ಯೆ: 97) **ದಕ್ಷಿಣಕ್ಕೆ:** ನಾಲೆ |
| 5. | 123, 124 ಮತ್ತು 125 (ಗುತ್ತಿಗೆ ಹಿಡುವಳಿ) | 470 | **ಗಿರಣಿ ಸಂಖ್ಯೆ: I** ನೂಲುವ ವಿಭಾಗದ ಕಟ್ಟಡ, ದಾಸ್ತಾನು ಮಳಿಗೆ, ಟೈಂ-ಕಛೇರಿ, ಆಡಳಿತ ಕಛೇರಿ, ಔಷಧಾಲಯ ಇತ್ಯಾದಿ, (ಮೂಲ ಒಡೆಯ, ಶ್ರೀ ಬಲ್ಲಪ್ಪ ತಮ್ಮಣ್ಣ ನಾಯಕ್, ಚಿಟಗುಪ್ಪಿ). | 5 | 32 | 106 | **ಆರ್.ಎಸ್. ಸಂಖ್ಯೆ: 123ರ ಚೆಕ್ಕುಬಂದಿ** **ಪೂರ್ವಕ್ಕೆ:** ಉನ್ನಕಲ್ ರಸ್ತೆ **ಪಶ್ಚಿಮಕ್ಕೆ:** ನಾಲೆ ಮತ್ತು ಕಾರವಾರ ರಸ್ತೆ ಮತ್ತು ಸಿಟಿಎಸ್ ಸಂಖ್ಯೆ: 472ರ ಭಾಗ **ಉತ್ತರಕ್ಕೆ:** ಕಾರವಾರ ರಸ್ತೆ. **ದಕ್ಷಿಣಕ್ಕೆ:** ಆರ್.ಎಸ್. ಸಂಖ್ಯೆ: 126. (ಸಿಟಿಎಸ್ ಸಂಖ್ಯೆ: 472 ಮತ್ತು 471) |
| 6. | 126 (ಸ್ವಂತದ್ದು) | 472 | ಅನಧಿಕೃತ ಸುಣ್ಣಕಲ್ಲು ಅಂಗಡಿ ಮತ್ತು ಆರ್.ಪಿ. ಧೋಂಗಡಿಯ ಕಾರ್ಖಾನೆ, ನೀರಿನ ಟ್ಯಾಂಕ್ ಮತ್ತು ಮೋರಿ, (ನಾಲೆ) ಇದರೊಂದಿಗೆ ಖಾಲಿ ಭೂಮಿ. | 1 | 21 | 41 | **ಪೂರ್ವಕ್ಕೆ:** ಉನ್ನಕಲ್ ರಸ್ತೆ. **ಪಶ್ಚಿಮಕ್ಕೆ:** ಆರ್.ಎಸ್. ಸಂಖ್ಯೆ: 124 ಮತ್ತು ನಾಲೆ. **ಉತ್ತರಕ್ಕೆ:** ಆರ್.ಎಸ್. ಸಂಖ್ಯೆ: 125 (ಸಿಟಿಎಸ್ ಸಂಖ್ಯೆ: 470) **ದಕ್ಷಿಣಕ್ಕೆ:** ನಾಲೆ. |
| 7. | 122 (ಕೃಷಿ) (ಗುತ್ತಿಗೆ ಹಿಡುವಳಿ) | 479 | ಸರ್ಕಾರಿ ಪ್ರಾಥಮಿಕ ಶಾಲೆಯ ಕಟ್ಟಡಗಳು ಮತ್ತು ಖಾಲಿ ಭೂಮಿ (ಮೂಲ ಒಡೆಯ 1. ಶ್ರೀ ಕೆ.ವಿ. ದೇಸಾಯಿ 2. ಗುಂಡು ರಾಮಚಂದ್ರ ದೇಸಾಯಿ 3. ರಾಮಚಂದ್ರ ಗುಂಡು ದೇಸಾಯಿ 4. ಅಣ್ಣಾಜಿ ಗುಂಡು ದೇಸಾಯಿ) | 0 | 33 | 000 | **ಪೂರ್ವಕ್ಕೆ:** ಆರ್.ಎಸ್.ಸಂಖ್ಯೆ: 164 ಮತ್ತು 165 (ಸಿಟಿಎಸ್ ಸಂಖ್ಯೆ: 480/1 ಮತ್ತು 484) **ಪಶ್ಚಿಮಕ್ಕೆ:** ಉನ್ನಕಲ್‌ಗೆ ರಸ್ತೆ. **ಉತ್ತರಕ್ಕೆ:** ಕಾರವಾರ ರಸ್ತೆ. **ದಕ್ಷಿಣಕ್ಕೆ:** ಆರ್.ಎಸ್. ಸಂಖ್ಯೆ: 117. |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| 8. | 164 (ಸ್ವಂತ) | 480/1 | ಸಿಬ್ಬಂದಿ ವಸತಿ ಗೃಹ ಮತ್ತು ಖಾಲಿ ಭೂಮಿ | 1 | 02 | 041 | **ಪೂರ್ವಕ್ಕೆ:** ಸಿಟಿಎಸ್ ಸಂಖ್ಯೆ: 485 ಮತ್ತು 446<br>**ಪಶ್ಚಿಮಕ್ಕೆ:** ಸಿಟಿಎಸ್ ಸಂಖ್ಯೆ: 479.<br>**ದಕ್ಷಿಣಕ್ಕೆ:** ಕಾರವಾರ ರಸ್ತೆ.<br>**ಉತ್ತರಕ್ಕೆ:** ಆರ್.ಎಸ್. ಸಂಖ್ಯೆ: 117 (ನಗರ ಸರ್ವೆಸಂಖ್ಯೆ: 478) |
| 9. | 164 (ಸ್ವಂತ) | 480/2 | ಸಿಬ್ಬಂದಿ ವಸತಿ ಗೃಹ ಮತ್ತು ಖಾಲಿ ಭೂಮಿ | 00 | 08 | 076 | |
| 10. | 164 (ಸ್ವಂತ) | 483 | ಸಿಬ್ಬಂದಿ ವಸತಿ ಗೃಹ ಮತ್ತು ಖಾಲಿ ಭೂಮಿ | 00 | 025 | 004 | |
| 11. | 164 (ಸ್ವಂತ) | 484 | ಸಿಬ್ಬಂದಿ ವಸತಿ ಗೃಹ ಮತ್ತು ಖಾಲಿ ಭೂಮಿ | 00 | 025 | 087 | |
| 12. | 165 (ಸ್ವಂತ) | 481 | ಖಾಲಿ ಭೂಮಿ | 0 | 28 | 062 | **ಪೂರ್ವಕ್ಕೆ:** ನಗರ ಸರ್ವೆ ಸಂಖ್ಯೆ: 445<br>**ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ:** ನಗರ ಸರ್ವೆ ಸಂಖ್ಯೆ: 480/1 |
| 13. | 165 (ಸ್ವಂತ) | 482 | ಖಾಲಿ ಭೂಮಿ | 0 | 08 | 104 | **ದಕ್ಷಿಣಕ್ಕೆ:** ನಗರ ಸರ್ವೆ ಸಂಖ್ಯೆ: 478 ಮತ್ತು 566 (ಆರ್.ಎಸ್. ಸಂಖ್ಯೆ: 117) |
| 14. | 166 (ಕೃಷಿ) (ಸ್ವಂತ) | 3475 | ತುಳಜಾ ಭವಾನಿ ದೇವಸ್ಥಾನ | 0 | 04 | 014 | **ಪೂರ್ವಕ್ಕೆ:** ಆರ್.ಎಸ್.ಸಂಖ್ಯೆ 166 (ಭಾಗ)<br>**ಪಶ್ಚಿಮಕ್ಕೆ:** ಆರ್.ಎಸ್.ಸಂಖ್ಯೆ 126<br>**ಉತ್ತರಕ್ಕೆ:** ಆರ್.ಎಸ್.ಸಂಖ್ಯೆ 166 (ಭಾಗ)<br>**ದಕ್ಷಿಣಕ್ಕೆ:** ನಾಲೆಯ ಪಾತ್ರ |
| 15. | 125 (ಗುತ್ತಿಗೆ ಹಿಡುವಳಿ) | 470 (ಭಾಗ) | ಖಾಲಿ ಭೂಮಿ. (ಮೂಲ ಒಡೆಯರು-ಮುನೇಶ್ವರ ಮಠದ ಪಂಚರು) | 0 | 19 | 101 | **ಪೂರ್ವಕ್ಕೆ:** ಉನ್ನಕಲ್ ರಸ್ತೆ.<br>**ಪಶ್ಚಿಮಕ್ಕೆ ಮತ್ತು**<br>**ಉತ್ತರಕ್ಕೆ:** ಸರ್ವೆಸಂಖ್ಯೆ: 124 (ಸಿಟಿಎಸ್ ಸಂಖ್ಯೆ: 470)<br>**ದಕ್ಷಿಣಕ್ಕೆ:** ಸರ್ವೆ ಸಂಖ್ಯೆ: 125 (ಸಿಟಿಎಸ್ ಸಂಖ್ಯೆ: 471)ರ ಉಳಿದ ಭಾಗ. |

**ಟಿಪ್ಪಣಿ: ಈ ಅನುಬಂಧವು ಕರ್ನಾಟಕ ಸಹಕಾರಿ ಬಟ್ಟೆಗಿರಣಿಗಳ ನಿಯಮಿತದಿಂದ ಮಾರಾಟ ಮಾಡಿದ ಸ್ವತ್ತುಗಳು ಮತ್ತು 1986 ಮೊದಲು ವಿವಿಧ ಸರ್ಕಾರಿ ಪ್ರಾಧಿಕಾರಗಳಿಂದ ಆರ್ಜಿಸಿದ ಸ್ವತ್ತುಗಳನ್ನು ಒಳಗೊಂಡಿರುವುದಿಲ್ಲ.**

1. 2005ರ ಅಧಿನಿಯಮ ಸಂಖ್ಯೆ 20ರ ಮೂಲಕ ದಿನಾಂಕ: 30.06.1986 ರಿಂದ ಸೇರಿಸಲಾಗಿದೆ.